ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೪, ಸಂಚಿಕೆ ೬, ನವೆಂಬರ್ ೨೦೧೬

ಕನ್ನಡದಿಟ್ಟಿಗೆ ನಮ್ಮನವಣ್ಣ

ಕನ್ನಡದರಮನೆ ಕಟ್ಟುವೆವು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಸಿಡ್ನಿ ದಸರಾ - ವರದಿ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೩
ರಾಂ ರಾಮ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೧
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೨

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೩

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೨೦

ಕನ್ನಡ ಕಥಾ ಲೋಕ
ಪುಟ ೧೪

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಭಾಷೆಯ ಉಳಿವಿಗೆ ಬೇಕಾದದ್ದು ಏನು? ಎಂದು ತಿಳಿದವರೊಂದಿಗೆ ಚರ್ಚಿಸಿದರೆ, ಬಹುಮುಖ್ಯವಾಗಿ ಕೇಳಿಬರುವುದು ಇವೆರಡು. ಭಾಷೆಯನ್ನು ಬಳಸುವುದು ಮತ್ತು ಭಾಷೆಯ ಬಗ್ಗೆ ತಿಳುವಳಿಕೆ ಇಟ್ಟುಕೊಳ್ಳುವುದು. ಇದರಾಚೆಗೂ ಹಲವು ಕಾರಣಗಳು ಇರುತ್ತವೆ. ಇವೆರಡರ ಬಗ್ಗೆ ಒಂದೆರಡು ಮಾತು.

ಮಾನವನ ನಡುವಿನ ಸಂವಹನಕ್ಕೆ ಭಾಷೆಯ ಉಗಮವಾಯಿತು ಎಂದು ಬಲ್ಲವರ ಹೇಳಿಕೆ. ಐತಿಹಾಸಿಕವಾಗಿ ನೋಡಿದರೂ ಇದು ಸತ್ಯವೆಂದು ಮನಗಾಣುತ್ತೇವೆ. ಭಾಷಾ ತಜ್ಞರು ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ, ಈಗಿರುವ ಎಲ್ಲ ಭಾಷೆಗಳ ಮೂಲವು ಒಂದು ಕಾಲದಲ್ಲಿ ಒಂದೇ ಆಗಿತ್ತು ಎಂದೂ ಹೇಳುತ್ತಾರೆ. ಭಾಷೆಯ ಮೂಲವನ್ನು ಹಿಡಿದು ಹೊರಟರೆ ಮೈ ಪುಳಕಿತವಾಗುವುದರಲ್ಲಿ ಸಂದೇಹವೇ ಇಲ್ಲ. ಭಾಷೆಯ ಬಗ್ಗೆ ಓದುತ್ತಾ, ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತ ಎಷ್ಟೋ ಬಾರಿ ಮೂಕವಿಸ್ಮಿತರಾದರೆ ಅಚ್ಚರಿ ಪಡಬೇಕಿಲ್ಲ. ಅಷ್ಟೊಂದು ಆಳವಾಗಿದೆ ಈ ಭಾಷೆಯೆಂಬ ಸಮುದ್ರ.

ಹೀಗಾಗಿ ಭಾಷೆಯೆಂಬುದು, ಕೇವಲ ಅಕ್ಷರಗಳು, ಸಂಕೇತಗಳಷ್ಟೇ ಎಂದು ತಿಳಿಯದೆ, ಆ ಭಾಷಾ ವಿಸ್ಮಯಲೋಕದಲ್ಲಿ ವಿಹರಿಸಿದರೆ ಮಾತ್ರ ಅದರ ವೈಭವವು ಅನಾವರಣವಾಗುತ್ತ ಹೋಗುತ್ತದೆ. ಕ್ರಿಸ್ತ ಪೂರ್ವ ಐದನೇ ಶತಮಾನದಲ್ಲೇ, ಪಾಣಿನಿಯು ಸಂಸ್ಕೃತದ ವ್ಯಾಕರಣವನ್ನು ವೈಜ್ಞಾನಿಕ ನಿಯಮಾವಳಿಯಂತೆ ಕೊಟ್ಟಿರುವ ಉದಾಹರಣೆ ನಮ್ಮ ಮುಂದಿದೆ. ಹಾಗೆಯೇ ಕನ್ನಡ ಭಾಷೆಯೂ ಹಲ್ಮಿಡಿ ಶಾಸನದ ಸಮಯಕ್ಕೆ ಬಹಳ ಮುಂದುವರಿದ ಭಾಷೆಯಾಗಿತ್ತು ಎಂದೂ ತಿಳಿಯುತ್ತೇವೆ. ಅದನ್ನು ಕೇವಲ ಭರತ ಭೂಮಿಯ ಅಥವಾ ಕನ್ನಡನಾಡಿನ ಹೆಮ್ಮೆಯೆಂದು ಬೀಗಿ, ಅದನ್ನು ಅಭ್ಯಸಿಸದೆ ಸುಮ್ಮನೆ ಹೆಮ್ಮೆಪಟ್ಟುಕೊಂಡರೆ ಬರುವ ಭಾಗ್ಯವು ಅಧಿಕವಲ್ಲ. ಮುಂದಿನ ಪೀಳಿಗೆಗಳಿಗೆ ನಾವುಗಳು ಮಾದರಿಯಾಗಬೇಕೇ ವಿನಹ ಅವರನ್ನು ದಾರಿಯಿಂದ ವಿಮುಖರನ್ನಾಗಿಸುವ ಅಡಚಣೆಯಾಗಬಾರದು. ನಾವುಗಳು ಭಾಷೆಯ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಂಡು ಅದನ್ನು ಉಪಯೋಗಿಸಿ ಮುಂದೆ ಸಾಗಬೇಕು.

ಭಾಷೆಯ ಬಳಸುವಿಕೆಯನ್ನು ಮನೆಕಟ್ಟುವ ಇಟ್ಟಿಗೆಯೆಂದುಕೊಂಡರೆ, ತಿಳುವಳಿಕೆಯಿಂದ ಮಾಡುವ ಸರಿಯಾದ ಭಾಷಾ ಪ್ರಯೋಗವು ಆ ಇಟ್ಟಿಗೆಯನ್ನು ಒಟ್ಟಿಗೆ ಹಿಡಿದಿರುವ ಗಾರೆಯಂತೆ. ಭಾಷೆಯೆಂಬ ಕಟ್ಟಡಕ್ಕೆ ಎರಡೂ ಮುಖ್ಯ. ಬಳಸುತ್ತ ಬಳಸುತ್ತ ಒಂದೊಂದೇ ಇಟ್ಟಿಗೆಯನ್ನು ಆ ತಿಳುವಳಿಕೆಯೆಂಬ ಗಾರೆಯೊಂದಿಗೆ ಸೇರಿಸಿ ಕಟ್ಟಿದಾಗ, ನೋಡಲು ಮನೋಹರವಾದ ಭಾಷೆಯ ಅರಮನೆಯು ಕಾಣುತ್ತದೆ.

ಬನ್ನಿ, ಭಾಷಾ ಕುತೂಹಲಿಗಳಾಗಿ, ಕನ್ನಡವೆಂಬ ಇಟ್ಟಿಗೆಯಿಂದ ಕನ್ನಡದ ಅರಮನೆಯನ್ನು ಕಟ್ಟೋಣ. ಕನ್ನಡದ ಒಳಿತಿಗೆ ನಮ್ಮ ಎದೆಯು ಮಿಡಿಯಲಿ. ಉಸಿರು ಕನ್ನಡಮಯವಾಗಲಿ. ▪

ಎರಡು ತಿಂಗಳ ಪ್ರಮುಖ ದಿನಗಳು

ನವೆಂಬರ್ - ಶ್ರೀ ದುರ್ಮುಖಿ ನಾಮ ಸಂವತ್ಸರ,
ದಕ್ಷಿಣಾಯಣ ಶರದ್/ ಹೇಮಂತ ಋತು, ಕಾರ್ತೀಕ/ಮಾರ್ಗಶಿರ ಮಾಸ

01 ಭಾ - ಕನ್ನಡ ರಾಜ್ಯೋತ್ಸವ ದಿನ
10 ಗು - ಪ್ರಭೋಧಿನಿ ಏಕಾದಶಿ
11 ಶು - ಉತ್ಥಾನ ದ್ವಾದಶಿ
17 ಗು - ಕನಕದಾಸರ ಜಯಂತಿ/ಸಂಕಷ್ಟ ಚತುರ್ಥಿ
14 ಸೋ - ಗುರು ನಾನಕ್ ಜನ್ಮದಿನ/ಮಕ್ಕಳ ದಿನ
25 ಶು - ಉತ್ಪನ್ನ ಏಕಾದಶಿ
29 ಮಂ – ಛಟ್ಟಿ ಅಮಾವಾಸ್ಯೆ
30 ಬು - ಮಾರ್ಗಶಿರ ಮಾಸ ಆರಂಭ

ಡಿಸೆಂಬರ್ ಶ್ರೀ ದುರ್ಮುಖಿ ನಾಮ ಸಂವತ್ಸರ,
ದಕ್ಷಿಣಾಯಣ, ಹೇಮಂತ ಮಾರ್ಗಶಿರ/ಪುಷ್ಯ ಮಾಸ

01 ಗು - ವಿಶ್ವ ಏಡ್ಸ್ ದಿನ
10 ಶ – ಮೋಕ್ಷದ ಏಕಾದಶಿ/ಗೀತಾ ಜಯಂತಿ
12 ಸೋ – ಹನುಮ ಜಯಂತಿ/ಈದ್ ಮಿಲಾದ್
13 ಮಂ – ಹೊಸ್ತಿಲ ಹುಣ್ಣಿಮೆ/ದತ್ತ ಜಯಂತಿ
14 ಬು – ಹುತ್ತರಿ ಹಬ್ಬ/ವಿಷ್ಣು ದೀಪೋತ್ಸವ
17 ಶ - ಸಂಕಷ್ಟ ಚತುರ್ಥಿ
24 ಶ - ಕ್ರಿಸ್ ಮಾಸ ಮುನ್ನಾ ದಿನ
25 ಭಾ - ಕ್ರಿಸ್ ಮಸ್ / ಸಫಲಾ ಏಕಾದಶಿ
28/29 ಅಮಾವಾಸ್ಯೆ

ಸಿಡ್ನಿ ಕನ್ನಡ ಶಾಲೆಯ ಸಹಾಯಧನಕ್ಕಾಗಿ ಏರ್ಪಡಿಸಿದ್ದ " Unplugged with ಮಯೂರ್ " ರಸ ಸಂಜೆ ಕಾರ್ಯಕ್ರಮವು ಕಳೆದ ಆಕ್ಟೊಬರ್ ೨೩ರ ಭಾನುವಾರ ಸಂಜೆ ವಾಟಲ್ ಗ್ರೋವ್ ಸಾರ್ವಜನಿಕ ಶಾಲೆಯ ಆವರಣದಲ್ಲಿ ನಡೆಯಿತು. ಅದರ ಬಗ್ಗೆ ಒಂದು ಪುಟ್ಟ ವರದಿಯನ್ನು ನಿಮ್ಮ ಮುಂದಿಡುವ ಪ್ರಯತ್ನವಿದು.

ಸಂಜೆ ೫ಕ್ಕೆ ಆರಂಭವಾದ ಮನರಂಜನೆಯು, ಶಾಲೆಯ ಮಕ್ಕಳಿಂದ ವೇದಿಕೆಯ ಮುಂದಿನ ಅಂಚಿನಲ್ಲಿ ಸಾಲು ದೀಪಗಳನ್ನು ಹಚ್ಚಿಟ್ಟು ಸ್ವಾಗತವನ್ನು ಕೋರುವುದರ ಮೂಲಕ ಶುರುವಾಯಿತು. ಜೊತೆಗೆ ಹಿನ್ನೆಲೆಯಲ್ಲಿ ಕುಮಾರಿಯರಾದ ಸಿಂಧು ಮತ್ತು ನಿರೀಕ್ಷ, ಕರ್ಕಿ ಅವರ "ಹಚ್ಚೇವು ಕನ್ನಡದ ದೀಪಾ" ಹಾಡನ್ನು ಸೊಗಸಾಗಿ ಹಾಡಿದರು. ನಂತರ ಪುಟಾಣಿಗಳಾದ ಚಿ। ಆರ್ಯನ್ “ಗಜಮುಖನೆ ಗಣಪತಿಯೇ” ಮತ್ತು ಚಿ।ಚಿನ್ಮಯಿ ರಂಗಿತರಂಗ ಚಿತ್ರದ “ಕರೆಯೋಲೆ ಕರೆಯೋಲೆ” ಹಾಡುಗಳನ್ನು ಅಚ್ಚುಕಟ್ಟಾಗಿ ಹಾಡಿದರು. ಶ್ರೀಮತಿಯಾರಾದ ವಿದ್ಯಾ ಅರಸ್ ಹಾಗೂ ಸ್ಮೃತಿ ರಾವ್ ನಿರೂಪಿಸಿದ ಮಕ್ಕಳ ತಂಡದ "ಕನ್ನಡ ಕೂಸುಗಳು" ಎಂಬ ನೃತ್ಯರೂಪಕ ಮನಸೆಳೆಯಿತು.

ಆ ದಿನದ ಮತ್ತೊಂದು ವಿಶೇಷ; ಕನ್ನಡದ ಹುಡುಗಿ ಚರಿಶ್ಮಾ ಲಿವರ್ಪೂಲ್ ಕ್ಷೇತ್ರದಿಂದ ಕೌನ್ಸಿಲ್ ಚುನಾವಣೆಯಲ್ಲಿ ಗೆದ್ದು ಬಂದದ್ದು, ಅವರನ್ನು ವೇದಿಕೆಯ ಮೇಲೆ ಕರೆದು ಹೂಗುಚ್ಚವನ್ನಿತ್ತು ಗೌರವಿಸಲಾಯಿತು.

ಇಲ್ಲಿಯವರೆಗೂ ಕಾರ್ಯಕ್ರಮ ನಿರೂಪಣೆ ಶ್ರೀಮತಿ ದೀಪ್ತಿ ಜಿತೇಂದ್ರ ಸ್ಪುಟವಾದ ಕನ್ನಡದಲ್ಲಿ ಸೊಗಸಾಗಿ ನಡೆಸಿಕೊಟ್ಟರು. ತದನಂತರದ ನಿರೂಪಣೆ ಶ್ರೀಮತಿ ಪೂರ್ಣಿಮಾ ಭಟ್ "ಬೊಂಬಾಟ್ ಗುರು" ಶೈಲಿಯಲ್ಲಿ ಮುಖ್ಯ ಕಲಾವಿದರನ್ನು ಬರಮಾಡಿ ಪರಿಚಯಿಸಿದರು. ರೇಡಿಯೋ ಜಾಕಿ ಮಯೂರ್ ರಾಘವೇಂದ್ರ ತಮ್ಮ ಪರಿಚಯವನ್ನು ವಿಡಿಯೋ ಮೂಲಕ ಮಾಡಿಕೊಂಡರೆ ಗಾಯಕರಾದ ದೀಪಕ್ ದೊಡ್ಡೇರ ಮತ್ತು ಆಕಾಂಕ್ಷಾ ಬಾದಾಮಿ ತಮ್ಮ ಸೊಗಸಾದ ಕಂಠದಿಂದ ಮೆಟ್ರೋದಿಂದ ರೆಟ್ರೋ ವರೆಗೆ ಅನ್ನೋ ಟೈಟಲ್ ಹೊಂದುವಂತೆ ಹಳೇ - ಹೊಸ ಹಾಡುಗಳ ಮಿಶ್ರಿತ ಹಾಡುಗಳ ಸರಮಾಲೆ ಸುರಿಸಿದರು. ಹಾಡುಗಳ ನಡುವೆ ಕನ್ನಡ ಚಿತ್ರರಂಗದ, ನಂತರ ತಿಳಿಯದ ವಿಚಾರಗಳು ಮಾಹಿತಿಗಳು ಪ್ರೇಕ್ಷಗರ ಮೆಚ್ಚುಗೆ ಪಡೆಯಿತು.

ಸುಗಮ ಗಾನ ಸಮಾಜ ಏರ್ಪಡಿಸಿದ ಸಂಗೀತ ಸಂಜೆಯ ಜೊತೆ ಜೊತೆಗೆ ನೋಡುಗರಿಗೆ ಕಾದಿತ್ತು ವಿಶೇಷ ಬೊಂಬೆ ಪ್ರದರ್ಶನ. ದಸರಾ ವಿಶೇಷತೆಯ ಮೆರುಗು ಇರುವುದು ಆ ಸಣ್ಣ ಪುಟ್ಟ ಬೊಂಬೆ ಸಾಲುಗಳಲ್ಲಿ. ಅದನ್ನು ಮಕ್ಕಳು ಮತ್ತು ದೊಡ್ಡವರು ನೋಡಿ, ಮೆಚ್ಚಿಕೊಂಡರು.

ಸಂಗೀತ ಕಾರ್ಯಕ್ರಮದ ಇನ್ನೊಂದು ಭಾಗದಲ್ಲಿ ಜನಪ್ರಿಯ ಸಿನಿಮಾ “ಪ್ರೇಮ ಲೋಕ”ದ ಹಾಡುಗಳನ್ನು ಹಾಡುವುದರ ಜೊತೆ ನಟಿಸಿ ಕೂಡ ಜನಗಳ ಮನರಂಜಿಸಿದರು. R J ಮಯೂರ ಅವರ ಮಾತಿನ ಚಕಮಕಿ, ಹಾಡುಗಳ ವಿವರಣೆ, ಹಿನ್ನೆಲೆ ಗಾಯಕರ ಮಾತುಕಥೆ ಕಾರ್ಯಕ್ರಮಕ್ಕೆ ವಿಶೇಷ ಅರ್ಥ ನೀಡಿತ್ತು.

“ಹುಟ್ಟಿದರೇ ಕನ್ನಡ ನಾಡಲ್ಲಿ ಹುಟ್ಟಬೇಕು” ಹಾಡು ಸಿಡ್ನಿ ಜನಗಳ ಕನ್ನಡ ಪ್ರೇಮವನ್ನು ಸಾಕಷ್ಟು ಜಾಸ್ತಿ ಮಾಡಿತ್ತು. ಕೆಲವು ಹಾಡಿಗೆ ವೀಕ್ಷಕರೂ ಕೂಡ ಹೆಜ್ಜೆ ಹಾಕಿ ಸಂತೋಷ ಪಟ್ಟರು.

ಸಿಡ್ನಿಯ ಗಾಯಕ ಶ್ರೀನಿವಾಸ್ ಗೋಪಿನಾಥ್ ಅವರಿಗೆ ಸನ್ಮಾನ ಮಾಡಿ ಗೌರವಿಸಿತು. ಕಮೀಟೀಗೆ ಸೇರ್ಪಡೆಯಾದ ಹೊಸ ಸದಸ್ಯರಾದ ನಾಗಭೂಷಣ್ ಮತ್ತು ದೀಪಕ್ ಪರಿಚಯ ಕೂಡ ಆಯಿತು.

ಹಾಗೆಯೇ ಸಿಡ್ನಿ ಕನ್ನಡ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ವೇದಿಕೆ ಮೇಲೆ ಕರೆದು ಗೌರವಿಸಲಾಯಿತು.

ಇನ್ನೇನು ಕಾರ್ಯಕ್ರಮ ಅಂತ್ಯ ಕಾಣತ್ತಿರುವಾಗಲೇ , ಹೊರಗಡೆ ಇಟ್ಟ ಬಿಸಿಬೇಳೆ ಬಾತ್ , ಮೊಸರನ್ನ , ಮೈಸೂರ್ ಪಾಕ್ ನ ಘಮ ಘಮವು ಜನರನ್ನು ಕೈ ಬೀಸಿ ಕರೆದಿತ್ತು .

ದೀಪಕ್ ದೊಡ್ಡೇರಾ , ಆಕಾಂಕ್ಷ ಬಾದಾಮಿ ಮತ್ತು ಮಯೂರ್ ಅವರೊಂದಿಗೆ ಜನ ಮಾತಾಡಿ, ಫೋಟೋ ತೆಗೆಸಿಕೊಂಡು ಸಂತೃಪ್ತಿ ಪಟ್ಟರು. ▪

ಸಿಡ್ನಿಯಲ್ಲಿ ಮಯೂರ ರಾಘವೇಂದ್ರ ಅವರು ದೀಪಕ್ ದೊಡ್ಡೇರ ಮತ್ತು ಅಕಾಂಕ್ಷ ಬಾದಾಮಿ ಜೊತೆಯಲ್ಲಿ ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮ





ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ |
ಮಹಿಮೆಯಿಂ ಜಗವಾಗಿ ಜೀವವೇಷದಲಿ ||
ವಿಹರಿಪುದದೊಳ್ಳಿತೆಂಬುದು ನಿಸದವಾದೊಡಾ |
ಗಹನ ತತ್ತ್ವಕೆ ಶರಣೋ-ಮಂಕುತಿಮ್ಮ ||

ತಿಳಿಯಗೊಡದೊಂದು=ತಿಳಿಯಗೊಡದ ಒಂದು, ವಿಹರಿಪುದದೊಳ್ಳಿತೆಂಬುದು=ವಿಹರಿಪುದು (ವಿಹಾರ ಮಾಡುವುದು)+ಅದು+ಒಳ್ಳಿತು=ಒಳ್ಳೆಯದು+ಎಂಬುದು, ನಿಸದವಾದೊಡಾ=ನಿಸದವಾದೊಡೆ+ಆ

ವಿಹರಿಪುದು=ವಿಹರಿಸುತ್ತದೆ, ಒಳ್ಳಿತೆಂಬುದು=ಒಳ್ಳೆಯದು+ಎಂಬುದು, ನಿಸದವಾದೊಡೆ=ನಿಜವಾದರೆ, ಗಹನ ತತ್ತ್ವಕೆ=ಗುಹ್ಯವಾದ, ಮಹತ್ತರವಾದ ತತ್ತ್ವಕೆ, ಶರಣೋ=ನಮಸ್ಕಾರ.

ವಿಹಾರಮಾಡುವುದು ಎಂದರೆ, ಎಲ್ಲದರಲ್ಲೂ ವ್ಯಾಪಕವಾಗಿ ಚೈತನ್ಯ ರೂಪದಲ್ಲಿರುವುದು ಎಂದೂ ಅರ್ಥೈಸಬಹುದು. ನಿಸದವಾದೊಡೆ ಎಂದರೆ ನಿಜವಾದರೆ ಎಂದೇ ಅರ್ಥೈಸಬೇಕು..

ಮಾನವರಲ್ಲಿ ಇದು ಒಂದು ನಿರಂತರ ಪ್ರಶ್ನೆ. ಆ ದೇವರೆಂಬ ವಸ್ತು "ಇದೆಯೋ-ಇಲ್ಲವೋ" ಎಂದು. ಇದೆ ಎಂದರೆ, ಅದಕ್ಕೆ ನಾನಾ ಹೆಸರುಗಳು, ರೂಪಗಳು, ಪೂಜೆಗಳು, ಹಲವು ಪೂಜಾ ವಿಧಾನಗಳು, ಆಚಾರಗಳು, ಸಂಪ್ರದಾಯಗಳು, ಆ ದೇವರ ರೂಪ ಮತ್ತು ಕಾರ್ಯವೈಖರಿಗೆ ನಾನಾ ಭಾಷ್ಯಗಳು. ಅನಾದಿ ಕಾಲದಲ್ಲೂ ಆ ದೇವರ ಅಸ್ತಿತ್ವವನ್ನು ಪ್ರಶ್ನಿಸುವ "ಚಾರ್ವಾಕ"ರೆಂಬುವರೂ ಇದ್ದರು. ಇಂದಿಗೂ ಆ ದೇವರೆಂಬ ವಸ್ತುವನ್ನು ನಂಬದಿರುವರೂ ಇದ್ದಾರೆ. ಕೆಲವರಿಗೆ ದೃಢವಾದ ನಂಬಿಕೆ. ಇನ್ನೂ ಕೆಲವರಿಗೆ ಅನುಮಾನ. ಮತ್ತೆ ಕೆಲವರಿಗೆ ಅದು ಆಗಾಗ ಬಂದು ಹೋಗುವ ವಿಚಾರ. ಕೆಲವರಿಗೆ ಸಂಕಟ ಬಂದಾಗ ಮಾತ್ರ ದೇವರ ನೆನಪು, ಕೆಲವರಿಗೆ ಬರೀ ತೋರಿಕೆಗೆ ಭಕ್ತಿ ಮತ್ತು ಕೆಲವರಿಗೆ ಹೊರಗೆ ತೋರದಿದ್ದರೂ ಆಂತರ್ಯದಲ್ಲಿ ಶುದ್ಧಭಕ್ತಿ.

ಇಲ್ಲಿ ಡಿ.ವಿ.ಜಿ.ಯವರೂ ಸಹ "ನಿಸದವಾದೊಡೆ" ಎಂದಿದ್ದಾರೆ. "ಜಗವ ಸೃಜಿಸಿ, ಗತಿ ಸೂತ್ರವನಾಡಿಸಿ" ಎಂದಿದ್ದಾರೆ ದಾಸರು. ಅಂದರೆ ಜಗತ್ತನ್ನು ಸೃಷ್ಟಿಸಿ, ಜಗತ್ತಿನ ಎಲ್ಲ ಜೀವರಾಶಿಗಳನ್ನೂ, ಪರಮಾತ್ಮ ತನ್ನ ಇಷ್ಟದಂತೆ ಆಡಿಸುವನೆಂಬ ಅರ್ಥದಲ್ಲಿದೆ ದಾಸರ ಉಕ್ತಿ. ಹಾಗೆ ಇಡೀ ವಿಶ್ವವನ್ನು ಸೃಷ್ಟಿಮಾಡಿ, ಎಲ್ಲ ಜಡ ಮತ್ತು ಜೀವಿಗಳಲ್ಲೂ ತಾನೇ ತಾನಾಗಿ ವ್ಯಾಪಿಸಿರುವ ಆ ಪರಮಾತ್ಮನೆಂಬುವುದು ಒಳ್ಳೆಯದು ಮತ್ತು ಇರುವುದು ಸತ್ಯವಾದರೆ, ಆ 'ಗಹನ'ಕ್ಕೆ ಅಂದರೆ ಗೂಢವಾದ, ಊಹೆ, ಅರಿವು ಮತ್ತು ತರ್ಕಕ್ಕೆ ನಿಲುಕದ, ಆ ಗುಹ್ಯವಾದ ವಸ್ತುವಿಗೆ ಶರಣಾಗು ಎನ್ನುತ್ತಾರೆ ಡಿ.ವಿ.ಜಿ. ಇಲ್ಲಿ 'ನಿಸದವಾದೊಡೆ' ಎಂದು ಸತ್ಯವಾದರೆ ಎಂದಿದ್ದಾರೆ. ಅಂದರೆ ಅದು ಅಸತ್ಯವೂ ಆಗಿರಬಹುದೇ? ಎಂದರೆ, ಅದು ಹಾಗಲ್ಲ. ನಂಬುವವನ ಮನಸ್ಸಿಗೆ, ಭಾವಕ್ಕೆ ಅದು ಸತ್ಯ ಎಂದು ಗೋಚರಿಸಿದರೆ, ಅದನ್ನು ನಂಬು ಮತ್ತು ಶರಣಾಗು ಎಂದು ಹೇಳಿದ್ದಾರೆ. ನಾನು ನಂಬಲ್ಲ ಎಂಬುವವನೂ ಸಹ "ನಾನು ದೇವರನ್ನು ನಂಬುವುದಿಲ್ಲ" ಎನ್ನುತ್ತಾನೆ. ಅಂದರೆ ಅವನು "ದೇವರು" ಎನ್ನುವ ವಸ್ತುವೊಂದಿದೆ, ನಾನು ಅದನ್ನು ನಂಬುವುದಿಲ್ಲ ಎಂದು ಅರ್ಥವಲ್ಲವೇ?

ಹಾಗಾಗಿ ವಾಚಕರೆ ನಿಮಗೆ ಆ ಪರಮಾತ್ಮ ವಸ್ತುವಿನಲ್ಲಿ ನಂಬಿಕೆ ಇದ್ದರೆ, ಶುದ್ಧವಾಗಿ ನಂಬಿ, ಶರಣಾಗಿ ಎನ್ನುತ್ತಾರೆ ಡಿ.ವಿ.ಜಿ. ▪

ತುಪ್ಪ

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ತುಪ್ಪ ತಯಾರಿಸುವ ಬಗೆ – ಆಯುರ್ವೇದದಲ್ಲಿ ಹೇಳಿರುವಂತೆ

ಜುಲೈ 2016 ರ ಚಿಲುಮೆಯಲ್ಲಿ ಬೇಳೆ ಮತ್ತು ಕಾಳುಗಳ ಮಹತ್ವದ ಬಗ್ಗೆ ಬರೆದಿದ್ದೆ. ಸೆಪ್ಟೆಂಬರ್ 2016 ರ ಚಿಲುಮೆಯಲ್ಲಿ ಅನ್ನ ಮಾಡಲು ಯಾವ ಬಗೆಯ ಅಕ್ಕಿ ಉಪಯೋಗಿಸಬೇಕು ಎಂಬ ಮಾಹಿತಿ ಕೊಟ್ಟಿದ್ದೆ. ಅನ್ನ, ಸಾರು ಸವಿಯಲು ಒಂದೆರಡು ಚಮಚ ತುಪ್ಪವಿದ್ದರೆ ಬಲು ರುಚಿ. ಡಾ. ಮಧುಸೂದನರವರು 'ಹೊರನಾಡ ಚಿಲುಮೆ' ಯಲ್ಲಿ ಸೋಮೇಶ್ವರ ಶತಕದ ಬಗ್ಗೆ ಬರೆದ ಲೇಖನದಲ್ಲಿನ ಈ ವಾಕ್ಯ ನೋಡಿ - "ಸುಡು ಸೂಪ ಘೃತಮಿಲ್ಲದೂಟವ" - ಅಂದರೆ 'ಸಾರು, ತುಪ್ಪವಿಲ್ಲದ ಊಟವನ್ನು ಬೆಂಕಿಗೆ ಹಾಕು' ಎಂದು. ಆದರೆ ನನಗೆ ತಿಳಿದಂತೆ ಬಹಳ ಜನರಿಗೆ ತುಪ್ಪ ಉಪಯೋಗಿಸಲು ಭಯ. ಕಾರಣ, ತುಪ್ಪ ಕೊಲೆಸ್ಟೆರಾಲ್ ಅಂಶವನ್ನ, ತೂಕವನ್ನ ಹೆಚ್ಚಿಸುತ್ತದೆ ಎಂದು. ಹಾಗಿದ್ದರೆ ಅನ್ನಕ್ಕೆ ಒಂದೆರಡು ಚಮಚ ತುಪ್ಪ ಉಪಯೋಗಿಸುವುದನ್ನು ಬಿಟ್ಟುಬಿಡಬೇಕೇ? ಈ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ಮುಂದೊಮ್ಮೆ ಕೊಡುತ್ತೇನೆ. ಈಗ ತಾಜಾ ತುಪ್ಪ ತಯಾರಿಸುವ ಬಗೆಯನ್ನು ತಿಳಿದುಕೊಳ್ಳೋಣ.

ಅಂಗಡಿಗಳಲ್ಲಿ ಕೊಂಡ ತುಪ್ಪ ತಾಜಾ ಇರುವುದಿಲ್ಲ. ಆದ್ದರಿಂದ ಬೆಣ್ಣೆಯನ್ನು ಕೊಂಡು ತುಪ್ಪ ತಯಾರಿಸುವುದು ಒಳ್ಳೆಯದು. ಮಾರ್ಕೆಟ್ಟಲ್ಲಿ ಸಿಗುವ ಬೆಣ್ಣೆಯಲ್ಲಿ ಎರಡು ಬಗೆ.

೧. ಸಾಲ್ಟೆಡ್ ಬಟರ್ (Salted butter) – ತಾಜಾ ಕೆನೆಯನ್ನು (fresh/pure cream) ಕಡೆದು ತೆಗೆದ ಬೆಣ್ಣೆಯನ್ನು ಉಪ್ಪು ನೀರಿನಲ್ಲಿ ತೊಳೆಯುತ್ತಾರೆ.

೨. ಅನ್-ಸಾಲ್ಟೆಡ್ ಕಲ್ಚರ್ಡ್ ಬಟರ್ (unsalted cultured butter). ತಾಜಾ ಕೆನೆಗೆ ಸ್ವಲ್ಪ ಮೊಸರನ್ನು ಸೇರಿಸಿ ಕಡೆದು ತೆಗೆದ ಬೆಣ್ಣೆಯನ್ನು ತಣ್ಣೀರಿನಲ್ಲಿ ತೊಳೆಯುತ್ತಾರೆ. ಇದರಲ್ಲಿ ಆರೋಗ್ಯಪೂರಕ ಜೀವಾಣುಗಳು (probiotics) ಸ್ವಲ್ಪಮಟ್ಟಿಗೆ ಇರುತ್ತವೆ. ಈ ಬೆಣ್ಣೆಯಿಂದ ತುಪ್ಪ ತಯಾರಿಸುವುದು ಉತ್ತಮ.

ಆದರೆ ಆಯುರ್ವೇದದ ಪ್ರಕಾರ ಶುದ್ಧ ತುಪ್ಪವನ್ನು ತಯಾರಿಸುವ ಬಗೆ ಅತ್ಯುತ್ತಮ. ಈ ಕೆಳಗೆ ನೋಡಿ.

ತಾಜಾ ಕೆನೆಯನ್ನು (fresh/pure cream) ಹಾಲು ಕಾಯಿಸುವಂತೆ ಕಾಯಿಸಿ, ಉಗುರು ಬೆಚ್ಚಗಾಗುವಷ್ಟು ತಣಿಸಿ. ಸ್ವಲ್ಪ ಮೊಸರನ್ನು ಸೇರಿಸಿ ಬೆಚ್ಚಗಿನ ಜಾಗದಲ್ಲಿ ೧೦-೧೨ ಗಂಟೆಗಳ ಕಾಲ ಹೆಪ್ಪಾಗಲು ಬಿಡಿ. ಈ ಮೊಸರನ್ನು ಕಡೆದು ತೆಗೆದ ಬೆಣ್ಣೆಯಿಂದ ತುಪ್ಪ ತಯಾರಿಸಿ. ಇದರಲ್ಲಿ ಆರೋಗ್ಯಪೂರಕ ಜೀವಾಣುಗಳು (probiotics) ಹೆಚ್ಚಿನ ಮಟ್ಟದಲ್ಲಿರುತ್ತವೆ. conjugated linoleic acid ಎಂಬ ದೇಹಕ್ಕೆ ಅವಶ್ಯಕವಾದ ಕೊಬ್ಬು ಇರುತ್ತದೆ. conjugated linoleic acid ಗಳು ರಕ್ತದ ಏರೋತ್ತಡವನ್ನು ನಿಯಂತ್ರಣದಲ್ಲಿಡಲು ಮತ್ತು ಅನೇಕ ರೋಗಗಳನ್ನು ತಡೆಹಿಡಿಯಲು ಸಹಾಯ ನೀಡಬಹುದು ಎಂದು ತಿಳಿದುಬಂದಿದೆ.

ಈ ರೀತಿ ತಯಾರಿಸಿದ ಬೆಣ್ಣೆ ಅಥವಾ ತುಪ್ಪವನ್ನು ದಿನಕ್ಕೆ ಒಂದೆರಡು ಟೇಬಲ್ ಸ್ಪೂನ್ ಉಪಯೋಗಿಸುವುದರಿಂದ ಆರೋಗ್ಯಕ್ಕೆ ಯಾವ ಹಾನಿಯೂ ಇಲ್ಲ. ಇದರ ರುಚಿ ವಿಶಿಷ್ಟ ಬಗೆಯದು. ಆರೋಗ್ಯದ ಬಗ್ಗೆ ಕಾಳಜಿ ಇದ್ದಲ್ಲಿ ಹೆಚ್ಚು ಕೊಬ್ಬು ಮತ್ತು ಸಕ್ಕರೆ ಇರುವ ಆಹಾರ ಮತ್ತು ಪಾನೀಯಗಳನ್ನು ದೂರವಿಡಿ. ▪

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಬೋಡ್ ಈಸ್ ಬ್ಯೂಟಿಫುಲ್

'ಸೈಡಿಗ್ಬನ್ನಿ ಸಾರ್, ರಿವರ್ಸ್ ಫ್ಲ್ಯಾಷ್ ಆಗತ್ತೆ' ಎಂದ ಲೈಟ್‌ಬಾಯ್. ಲೈಟ್‌ಬಾಯ್ ಮಾತುಗಳನ್ನು ಲೈಟಾಗಿ ತೆಗೆದುಕೊಳ್ಳಲಾಗದೆ ಪಕ್ಕಕ್ಕೆ ಸರಿದೆ.

ಅವನ ತಪ್ಪೇನಿಲ್ಲ. ಹೈವೇಯಲ್ಲಿ ರಾತ್ರಿ ಹೊತ್ತು ಸಂಚರಿಸುವಾಗ ಎದುರಿನಿಂದ ಬರುವ ಲಾರಿಗಳು ಸಹ ದೂರದಿಂದಲೇ ನನ್ನ ತಲೆ ಕಂಡಾಗ ಡಿಮ್ & ಡಿಪ್ ಮಾಡುತ್ತವೆ. ನಾನೂ ತಲೆಗೆ ಪೇಪರನ್ನೋ, ಪುಸ್ತಕವನ್ನೋ ಅಡ್ಡ ಹಿಡಿದು, ತೆಗೆದು, ಹಿಡಿದು, ತೆಗೆದು ಮಾಡುವುದರ ಮೂಲಕ ಡಿಮ್ & ಡಿಪ್ ಎಫೆಕ್ಟ್ ಕೊಡುತ್ತೇನೆ.

'ಟೋಪಿ ಹಾಕ್ಕೊಳ್ಳಾರ್ದೇನ್ರೀ...' ನುಡಿದರು ನಿರ್ದೇಶಕರು.

'ಅದಕ್ಕೆ ಸೆಲ್ಫ್ ಸರ್ವೀಸ್ ಅಗತ್ಯವಿಲ್ಲ. ಬೇಕಾದಷ್ಟು ಜನರಿದ್ದಾರೆ' ಎಂದೆ.

ನನ್ನದು ತಿರುಪತಿ, ಧರ್ಮಸ್ಥಳ ಮುಂತಾದ ತೀರ್ಥಕ್ಷೇತ್ರಗಳ ಕ್ಷೌರಿಕರ ಪ್ರಭಾವದಿಂದ ಉಂಟಾದ ಟೆಂಪೊರರಿ ಬೋಡಲ್ಲ. ಜಗತ್ತಿನ ಅತ್ಯಂತ ದೊಡ್ಡ ಹೇರ್ ಡ್ರೆಸರ್ ಆದ ನಿಸರ್ಗಮ್ಮ ಬೋಡಿಸಿದ ಬೋಡು. ಹೆಂಡತಿ, ಪ್ರೇಯಸಿ, ಗೆಳತಿ, ಬ್ಲೇಡ್ ಕಂಪನಿಗಳಿಂದ ಉಂಟಾದ ಬೋಡುತನ ಮತ್ತೊಮ್ಮೆ ಚಿಗುರಿದರೂ ಚಿಗುರೀತು, ಪ್ರಕೃತಿ ಒಮ್ಮೆ ಬೋಡಿಸಿದರೆ ಭೋಲಾನಾಥನೂ ಮತ್ತೆ ಚಿಗುರಿಸಲಾರ.

ಇರಲಿರಲಿ. ಬೋಡುತನ ಶ್ರೇಷ್ಠವೆಂದೇ ನನ್ನ ಅಭಿಪ್ರಾಯ. 'ದೇವನು ಮೊದಲು ತಲೆಗಳನ್ನು ಸೃಷ್ಟಿಸಿದನು. ಯಾವ ತಲೆಗಳು ಸೃಷ್ಟಿಸಿದಾಲೇ ಸುಂದರವಾಗಿ ಕಂಡವೋ ಅವನ್ನು ಹಾಗೆಯೇ ಬಿಟ್ಟನು. ಸುಂದರವಲ್ಲದ ತಲೆಗಳಿಗೆ ಕೂದಲಿನ ಹೊದಿಕೆ ತೊಡಿಸಿದನು' ಎಂದಿದ್ದಾರೆ ಒಬ್ಬ ಆಂಗ್ಲ ಕವಿ. ಆಂಗ್ಲಕವಿ ಹೇಳಿದಮೇಲೆ ಅದು ಹರಿಶ್ಚಂದ್ರನ ಮಾತಿನಷ್ಟೇ ಸತ್ಯವೆಂದು ಸಾಮಾನ್ಯ ಕನ್ನಡಿಗ ಒಪ್ಪಿಕೊಳ್ಳುವುದು ಅನೂಚಾನವಾಗಿ ಬಂದ ಸಂಪ್ರದಾಯ.

ನಮ್ಮ ತಲೆಗೂ ಶುಕ್ಲಪಕ್ಷದ ಚಂದ್ರನಿಗೂ ಸಾಮ್ಯವಿದೆ. ಕಪ್ಪನೆಯ ಮೋಡವನ್ನು ಪ್ರತಿ ದಿನವೂ ಸರಿಸುತ್ತಾ ಸಾಗಿ ಹುಣ್ಣಿಮೆಯ ಹೊತ್ತಿಗೆ ಕತ್ತಲೆಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವ ತಾನೇ ತಾನಾಗಿ ಹೊಳೆಯುವ ಚಂದ್ರನಂತೆಯೇ ಬಾಲ್ದಿಯ ತಲೆಯು ಸುತ್ತಲಿನ ಕೂದಲನ್ನು ಇನಿತಿನಿತೇ ಇಲ್ಲವಾಗಿಸುತ್ತಾ ಸಾಗಿ ಕೊನೆಗೆ ಹುಣ್ಣಿಮೆಯಂತೆ ಥಳಥಳಿಸುತ್ತದೆ. ನಿಸರ್ಗದಲ್ಲಿ ಹುಣ್ಣಿಮೆ ಸರಿದು ಮತ್ತೆ ಅಮಾವಾಸ್ಯೆ ಕತ್ತಲು ಹರಡುತ್ತದೆ. ಈ ವಿಷಯದಲ್ಲಿ ಮಾತ್ರ ಕೇಶರಾಶಿ ಅವಿನ್ಯೂ ರೋಡಿನಂತೆ - ಒನ್ ವೇ!

ಎನಿತೆನಿತು ಶಿರವಿಹುದೊ ಅನಿತನಿತು ಬಾಲ್ದಿಹುದು
ಎಣಿಸಲ್ಕೆ ಶಕ್ಯವೇಂ ಬಾಲ್ದುಗಳ ಪರಿಯ
ಎಳೆತನದಿ ಹರೆಯದಲಿ ಮುಪ್ಪಿನಲಿ ತಪ್ಪಿನಲಿ
ಎಲ್ಲರನು ಅಪ್ಪುವುದು ಬೋಡುತನವು

ಎಂದರು ನನ್ನ ಗುರು ಟೀಕಾಚಾರ್ಯರು. ಈ ಬೋಡುತನದ ಆದಿ, ಅದರ ಫಲಗಳು, ಅದು ಎಲ್ಲೆಲ್ಲಿ ಪ್ರಯೋಜನಕ್ಕೆ ಬರುತ್ತದೆ ಎಂಬುದನ್ನೆಲ್ಲ ನೋಡೋಣ.

ಕೃತ ಮತ್ತು ತ್ರೇತಾಯುಗದಲ್ಲಿ ಇದ್ದವರೆಲ್ಲರೂ ಸಾಕಷ್ಟು ಕಂದಮೂಲಗಳು, ಸೊಪ್ಪುಸದೆಗಳನ್ನು ತಿನ್ನುತ್ತಿದ್ದುದರಿಂದ ವಿಟಮಿನ್ ರಿಚ್ ಮತ್ತು ಫೈಬರ್ ರಿಚ್ ಆಹಾರ ತಿಂದ ಪರಿಣಾಮವಾಗಿಯೂ, ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುತ್ತಿದ್ದುದರಿಂದ ವಿಟಮಿನ್ ಡಿ ಕೊರತೆ ಇಲ್ಲದೆಯೂ ಜೀವಿಸುತ್ತಿದ್ದುದರಿಂದ ಘೋರತಪಸ್ಸಿನಲ್ಲಿ ನಿರತರಾಗಿದ್ದು, ತಲೆ ಬಾಚಿಕೊಳ್ಳಲು ಸಮಯವಿಲ್ಲದಿದ್ದರೂ, ಶಾಂಪೂ ಬಾತ್ ಇಲ್ಲದಿದ್ದರೂ, ಅವರ ಸಮತೂಕದ ಆಹಾರದ ಸುಪರಿಣಾಮವಾಗಿ ಅವರು ಬೋಡಾದ ಪ್ರಸಂಗ ಎಲ್ಲಿಯೂ ಕಂಡುಬರುವುದಿಲ್ಲ. ಬೋಡುತನದ ಮೊದಲ ಪ್ರಸಂಗ ಬರುವುದೇ ಮಹಾಭಾರತದಲ್ಲಿ.

ಅರಣ್ಯಪರ್ವದಲ್ಲಿ ದ್ರೌಪದಿಯನ್ನು ಕೆಣಕಿದ ಜಯದ್ರಥನನ್ನು ಭೀಮನು ಧರ್ಮರಾಯನ ಮುಂದೆ ಎಳೆತಂದು ನಿಲ್ಲಿಸಿ 'ಅಣ್ಣ, ಅಪ್ಪಣೆ ಕೊಡು; ಇವನ ಶಿರಚ್ಛೇದ ಮಾಡುತ್ತೇನೆ' ಎಂದ. ಧರ್ಮರಾಯ 'ಬೇಡ ಭೀಮಸೇನ. ಅವನ ಕೇಶಕರ್ತನ ಮಾಡಿಬಿಡು' ಎಂದ. ತತ್ಫಲವಾಗಿ ಮೊದಲ ಆಯುಷ್ಕರ್ಮ ಮಾಡಿಸಿಕೊಂಡವನು ಜಯದ್ರಥನೆಂದೂ, ಮೊದಲ ಆಯುಷ್ಕರ್ಮ ಮಾಡಿದವನು ಭೀಮನೆಂದೂ ಅರಿಯಬಹುದು. ನೈಸರ್ಗಿಕವಾಗಿ ಜಗತ್ತಿನ ಮೊಟ್ಟಮೊದಲ ಬೋಡ ಎಂಬ ಖ್ಯಾತಿಗೆ ಗ್ರೀಸ್‌ನ ಕೈರೋಸ್ ಭಾಜನನಾಗುವುದನ್ನು ಒಂದೇ ಒಂದು ಕೂದಲೆಳೆಯ ಅಂತರದಿಂದ ತಪ್ಪಿಸಿಕೊಂಡ. ಕೈರೋಸ್ ಹುಟ್ಟಿನಿಂದ ಕೊನೆಯವರೆಗೆ ಒಂದೇ ಕೂದಲು ಇದ್ದು, ಅದು ಉದುರದ ಕಾರಣ ಬೋಡನಾಗದೆ, ಏಕ್ ಹೀ ಬಾಲ್ ಹೊಂದುವುದರ ಮೂಲಕ ಇಕ್‌ಬಾಲ್ ಎಂಬ ಹೆಸರನ್ನು ಹುಟ್ಟುಹಾಕಲು ಕಾರಣನಾದನೆಂಬ ಉಲ್ಲೇಖ ಗ್ರೀಕೋ-ಅರಬ್ ಪುರಾಣದಲ್ಲಿ ದೊರಕಬಹುದೇನೋ.

ಮುಂದಿನ ಪುಟ ನೋಡಿ ...

ಬೋಡುತನದ ವಿಷಯದಲ್ಲಿ ಭಾರತದಲ್ಲಿ ಸ್ತೀಯರಿಗೇ ಹಲವಾರು ಯುಗಗಳು ಆದ್ಯತೆ ನೀಡಲಾಗಿತ್ತು. ಪತಿ ಸತ್ತ ತಕ್ಷಣ ಚಿತೆಗಾಗಿ ಸೌದೆ ಕತ್ತರಿಸುವುದಕ್ಕೆ ಮುಂಚೆ ಹೆಂಡತಿಯ ಕೂದಲನ್ನು ಕತ್ತರಿಸಲಾಗುತ್ತಿತ್ತು. ತಿಂಗಳಿಗೋ, ಎರಡು ತಿಂಗಳಿಗೋ ಒಮ್ಮೆ ಈ ಬೋಡುತನದ ಸ್ಟೇಟಸ್ ಮೇಯ್ನ್‌ಟೇಯ್ನ್ ಮಾಡಲು ಮನೆಗೇ ಕ್ಷೌರಿಕರನ್ನು ಕರೆಸಲಾಗುತ್ತಿತ್ತು. ಗೊರೂರು ಒಂದು ಹಳ್ಳಿ. ಅಲ್ಲಿಗೆ ತಿಂಗಳಿಗೊಮ್ಮೆ ಬರುತ್ತಿದ್ದ ಕ್ಷೌರಿಕ ಮೂರು ತಿಂಗಳಾದರೂ ಬರಲಿಲ್ಲ. ಮೂಲೆಮನೆಯ ವಿಧವೆಯ ತಲೆಯಲ್ಲಿ ಕೂದಲು ಹೆಚ್ಚಾಗಿಯೇ ಬೆಳೆದಿತ್ತು. ವಿಧವೆಗೆ ಕೂದಲಿರುವುದು ವಜ್ಯ್ರ. ಕ್ಷೌರಿಕನಿಲ್ಲ. ಅದೇ ಹಳ್ಳಿಯ ರಾಮಸ್ವಾಮಿ ಅಯ್ಯಂಗಾರ್ ತಮ್ಮ ಕೇಶಕರ್ತನ ತಾವೇ ಮಾಡಿಕೊಳ್ಳುತ್ತಿದ್ದುದನ್ನು ಅರಿತ ಅಜ್ಜಿ 'ರಾಮೂ, ಯಾರಿಗೂ ಹೇಳದೆ ಇದೊಂದು ಸಾರಿ ನನ್ನ ತಲೆಯ ಕ್ಷೌರ ಮಾಡಿಬಿಡೊ' ಎಂದು ಗೋಗರೆಯಿತು. ಮನಕರಗಿದ ರಾಮಸ್ವಾಮಿಗಳು ಮರುದಿನ ಅಜ್ಜಿಯ ಹಿತ್ತಲಿಗೆ ನಡೆದು, ಯಾರಿಗೂ ತಿಳಿಯದಂತೆ ಅಜ್ಜಿಯ ತಲೆ ನುಣ್ಣಗಾಗಿಸಿದರು. ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತಾ ಅಜ್ಜಿ 'ಆ ಕ್ಷೌರಿಕನಿಗಿಂತ ನೀನೇ ವಾಸಿ. ತಿಂಗಳಿಗೊಮ್ಮೆ ಮಾಡಿಬಿಡು' ಎಂದು ಬೆನ್ನುಬಿದ್ದಿತು. ಒಮ್ಮೆ ರಾಮಸ್ವಾಮಿಯವರ ಮಾವ ಅಳಿಯನನ್ನು ನೋಡಲೆಂದು ಊರಿಗೆ ಬಂದರು. ಅಳಿಯ ಮನೆಯಲ್ಲಿಲ್ಲ. ಊರೆಲ್ಲ ಹುಡುಕುತ್ತ ಅಜ್ಜಿಯ ಮನೆಗೆ ಬಂದರು. ಅಜ್ಜಿಗೆ ಕ್ಷೌರ ಮಾಡುತ್ತ ಕುಳಿತಿದ್ದ ರಾಮಸ್ವಾಮಿ ಮಾವನ ಭಯದಿಂದ 'ಬಂದೆ ಅಜ್ಜಿ' ಎನ್ನುತ್ತಾ ಮರವೇರಿ ಕುಳಿತರು. ಮರದ ಮೇಲೆ ಅಳಿಯ; ಕೆಳಗೆ ಮಾವ; ಒಳಗೆ ಅಜ್ಜಿ. ಕಾದು ಬಸವಳಿದ ಅಜ್ಜಿ 'ಎಲ್ಹೋದಿಯೋ ರಾಮೂ...' ಎನ್ನುತ್ತಾ ಹೊರಬಂದಾಗ ಎಲ್ಲವೂ ಬಯಲಾಗಿ, ರಾಮಸ್ವಾಮಿಯ ಪಾಡು ಯಾರಿಗೂ ಬೇಡ ಎಂಬಂತಾಗಿತ್ತು! ಬೋಡುತನ ಸ್ತ್ರೀಯರಿಗೆ ಅಂದು ಶಾಪ. ಇಂದು? ಫಣಿಯಮ್ಮ ಚಿತ್ರಕ್ಕಾಗಿ ಎಲ್.ವಿ. ಶಾರದಾ, ಸ್ಟಾರ್ ಟ್ರೆಕ್ ಚಿತ್ರಕ್ಕಾಗಿ ಪರ್ಸಿಸ್ ಕಂಬಾಟಾ, ಮ್ಯಾಡ್ ಮ್ಯಾಕ್ಸ್ ಚಿತ್ರಕ್ಕಾಗಿ ಚಾರ್ಲಿಜ್ ಥೆರಾನ್, ಮೌತ್ ಟು ಮೌತ್ ಚಿತ್ರಕ್ಕಾಗಿ ಎಲೆನ್ ಪೇಜ್, ಮುಂತಾದವರು ವೈದಿಕ ಆಚಾರ್ಯರಿಗಿಂತ ನುಣ್ಣಗೆ ತಲೆಬೋಳಿಸಿಕೊಂಡರೆ ಹಲವಾರು ಕ್ಯಾಟ್‌ವಾಕ್ ಮಾಡುವ ಮಾಡಲ್‌ಗಳೂ ತಲೆಯ ಮೇಲೆ ಕೈಯಿಟ್ಟರೆ ಗಲ್ಲದವರೆಗೆ ಜಾರುವಷ್ಟು ನುಣುಪಾಗಿ ಬೋಳಿಸಿಕೊಂಡು ಅದನ್ನೇ ಒಂದು ಫ್ಯಾಷನ್ನಾಗಿ ಪರಿವರ್ತಿಸಿ, ಅದರಿಂದಲೇ ಖ್ಯಾತಿಯನ್ನೂ ಪಡೆದಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ಬೋಡುತಲೆಯ ಮೇಲೆಯೇ ಕ್ಯಾಮರಾ ಝೂಮ್ ಇನ್ ಆಗುವುದರ ಮೂಲಕ ಒಬ್ಬ ನಟನ ಪರಿಚಯವಾಯಿತು. ಶಾನ್ ಚಿತ್ರದಲ್ಲಿ ಬೋಡುತಲೆಯ ಮೇಲೆ ಕೈಯಾಡಿಸಿಕೊಳ್ಳುವ ಸೀನ್‌ನಿಂದಲೇ ಪರಿಚಿತನಾದ ಈ ನಟ ಇಂದಿಗೂ ಒಳ್ಳೆಯ ಹೆಸರನ್ನು ಪಡೆದಿರುವ ಕುಲ್‌ಬೂಶನ್ ಕರ್ಬಂದ.

ಬೋಡುಗಂಡುಗಳು ಆ ಕಾಲದಲ್ಲೂ ಇದ್ದರೆಂಬ ಅಂಶವನ್ನು ಖಲ್ವಾಟೋ ದಿವಸೇಶ್ವರಸ್ಯ ಕಿರಣೈಃ ಸಂತಾಪಿತೋ ಮಸ್ತಕೇ ತಾಲಸ್ಯ ಮೂಲಂ ಗತಃ । ತತ್ರಾಪಿ ಪತಿತಾತ್ ಫಲಾತ್ ಭಗ್ನಂ ಸಶಬ್ದಂ ಶಿರಃ । ಪ್ರಾಯೋ ಗಚ್ಛತಿ ಯತ್ರ ಭಾಗ್ಯರಹಿತಃ ತತ್ರೈವ ಯಾಂತಿ ಆಪದಃ ॥ ಎಂಬ ಸುಭಾಷಿತದಿಂದ ಅರಿಯಬಹುದು. ಬೋಡುತಲೆಯವನೊಬ್ಬ ಬಿಸಿಲನ್ನು ತಾಳದೆ ಮರದ ಬುಡಕ್ಕೆ ಹೋಗಿ ನಿಂತನು. ಮರದಿಂದ ಫಲವೊಂದು ಅವನ ತಲೆಯ ಮೇಲೆ ಬಿದ್ದಿತು. ಪ್ರಾಯಶಃ ಎಲ್ಲಿ ಭಾಗ್ಯರಹಿತನು ಹೋಗುವನೋ ಅಲ್ಲಿಗೇ ದುರದೃಷ್ಟವು ಅವನನ್ನು ಅಟ್ಟಿಸಿಕೊಂಡು ಹೋಗುವುದು ಎಂಬ ಅರ್ಥದ ಈ ಸುಭಾಷಿತ ಪೂರ್ವಕಾಲದಲ್ಲಿ ಬೋಡುತನ ಇದ್ದುದಕ್ಕೆ ಸಾಕ್ಷಿಯಾಗಿದೆ.

ಬಾಲ್ಡಿತನದ ಆರಂಭ ಒಬ್ಬೊಬ್ಬರಲ್ಲಿ ಒಂದೊಂದು ವಿಧ. ಮೊದಲಿಗೆ ನೆತ್ತಿಯ ಸುತ್ತ ಒಂದು ಸಣ್ಣ ಬಿಂದುವಿನಂತೆ ಕಂಡು, ಹಣೆಗೆ ಧರಿಸುವ ಬೊಟ್ಟಿನಾಕಾರಕ್ಕೆ ಬೆಳೆದು, ಬಾವಿಯಂತೆ ಅಗಲವಾಗುತ್ತಾ ಸಾಗಿ, ಕೆರೆಯ ದಡದಂತೆ ಅಸ್ತವ್ಯಸ್ತವಾಗಿ ಸುತ್ತಲೂ ಆವರಿಸಿ, ಕಟ್ಟಕಡೆಗೆ ಸರ್ವಚರ್ಮಸಮನ್ವಯದಂತೆ ಪಸರಿಸುವ ಫುಲ್ ಬಾಲ್ಡಿತನ ಕೆಲವರಿಗೇ ಶೋಭಾಯಮಾನ. ಸ್ಯಾಂಪಲ್‌ಗೂ ಕೂದಲಿಲ್ಲದಿದ್ದರೂ ಮಗುವಿನ ಮುಗ್ಧತೆಯ, ಮಗುವಿನ ನಗುವಿನ ಮೂಲಕ ಜನಸೆಳೆದ ಮಹಾತ್ಮ ಗಾಂಧಿ ಇದಕ್ಕೆ ಅತ್ಯುತ್ತಮ ಉದಾಹರಣೆ. ಬೋಡುತಲೆಯಲ್ಲೂ ಕೆಲವು ಮ್ಯಾಟ್ ಫಿನಿಷ್; ಕೆಲವು ಗ್ಲಾಸಿಯಾಗಿರುತ್ತವೆ. ಮ್ಯಾಟ್ ಫಿನಿಷ್‌ಗೆ ಈದಿ ಅಮೀನ್ ಉತ್ತಮ ಉದಾಹರಣೆ; ಗ್ಲಾಸಿ ಫಿನಿಷ್‌ಗೆ ಸಿಹಿಕಹಿ ಚಂದ್ರುವಿಗಿಂತ ಉತ್ತಮರಿಲ್ಲವೀ ಜಗದೊಳ್.

ಕೆರೆಗಳ ಸುತ್ತಮುತ್ತಲಿನ, ಅರಣ್ಯಪ್ರದೇಶದ ಅಥವಾ ಗೋಮಾಳದ ಜಾಗವನ್ನು ಇಂಚಿಂಚಾಗಿ ಆಕ್ರಮಿಸುವ ರೀತಿಯಲ್ಲಿ ಹಣೆಯ ಮುಂಭಾಗದಿಂದ ಆರಂಭವಾಗಿ, ಅರ್ಧಚಂದ್ರಾಕಾರದಲ್ಲಿ ಮುಂದುವರಿಯುತ್ತಾ ನಿಧಾನವಾಗಿ ಹೆಕ್ಕತ್ತಿನವರೆಗೆ ಸಾಗುವುದೂ ಇನ್ನೊಂದು ವಿಧವಾದ ಬಾಲ್ಡಿತನ. ಆದರೆ ಪ್ರಕೃತಿಯೂ ಜನರಂತೆಯೇ ಸೋಮಾರಿ. ಕೈಗೊಂಡ ಕೆಲಸವನ್ನು ಎಷ್ಟೋ ಬಾರಿ ಅರ್ಧಕ್ಕೇ ನಿಲ್ಲಿಸಿಬಿಡುತ್ತದೆ. ಆಗ ಫುಟ್‌ಪಾತ್ ಬಾಲ್ಡಿ, ಗೆರಿಬಾಲ್ಡಿ ಮತ್ತು ಪ್ಯಾಚ್ ಬಾಲ್ಡಿ ಎಂಬ ಮೂರು ವಿಧಗಳು ಉದ್ಭವಿಸುತ್ತವೆ. ಚಿಕ್ಕಮಕ್ಕಳು ಕೆದಕಿ ಕೆದಕಿ ಊಟ ಮಾಡಿ ಪ್ಲೇಟಿನ ಅಲ್ಲಲ್ಲಿ ಅಷ್ಟಷ್ಟು ಉಳಿಸಿದಂತೆ ತಲೆಯಲ್ಲಿ ಬೋಡುಪ್ರದೇಶದ ಮಧ್ಯೆ ಕೇಶಪ್ರದೇಶವು ಲಕ್ಷದ್ವೀಪದ ದ್ವೀಪಗಳಂತೆ ಕಾಣಿಸುವುದೇ ಪ್ಯಾಚ್ ಬಾಲ್ಡಿ. ಶಿರದ ಮಧ್ಯಭಾಗವು ಸಂಪೂರ್ಣವಾಗಿ ಕೂದಲುರಹಿತವಾಗಿದ್ದು, ಎರಡೂ ಕಿವಿಗಳ ಬದಿಯಲ್ಲಿ ಮಾತ್ರ ಕೂದಲು ಉಳಿದವರು ಫುಟ್‌ಪಾತ್ ಬಾಲ್ಡಿ. ಮುಚ್ಚಿದ್ದಕ್ಕಿಂತಲೂ ಬಿಚ್ಚಿದ್ದೇ ಹೆಚ್ಚಾದ ಐಟಂ ಸಾಂಗ್ ಹೀರೋಯಿನ್‌ಗಳ ಬಟ್ಟೆಯಂತೆ ಕೂದಲು ಇದೆಯೆಂದರೆ ಇದೆ, ಇಲ್ಲವೆಂದರೆ ಇಲ್ಲ ಎನ್ನುವ ಮಟ್ಟಕ್ಕೆ ಅಲ್ಲಲ್ಲಿ ಇದ್ದು, ನೋಡುಗರಿಗೆ ಬೋಡುತಲೆಯ ಮೇಲೆ ಎಕ್ಸರ್ಸೈಝ್ ಪುಸ್ತಕದಲ್ಲಿ ಹಾಕಿದ ಗೀಟುಗಳಂತೆ ಕಾಣುವ ಮಟ್ಟಕ್ಕೆ ಕೂದಲು ಇರುವುದೇ ಗೆರಿಬಾಲ್ಡಿ.

ಆಧುನಿಕ ಹುಡುಗರು ಸ್ವಯಂಪ್ರೇರಣೆಯಿಂದ ಫುಲ್ ಬಾಲ್ಡ್ ಅಥವಾ 'ಕೂಲ್ ಕಟ್' ಮಾಡಿಸಿಕೊಳ್ಳುತ್ತಾರೆ. ಅದು ನಿಜಕ್ಕೂ ಕೂಲ್ ಕಟ್ಟೇ - ಎಸಿಯಲ್ಲಿ ಹೋದತಕ್ಷಣ ತಲೆ ತಣ್ಣಗಾಗುವುದರಿಂದಲೇ ಅದಕ್ಕೆ ಆ ಹೆಸರು ಬಂದಿತಂತೆ.

ಮುಂದಿನ ಪುಟ ನೋಡಿ ...

ಇನ್ನು ಕೆಲವರು ಮೇಲೆ ಸಂಪೂರ್ಣ ಕೂದಲನ್ನು ಉಳಿಸಿಕೊಂಡು, ಪಕ್ಕಗಳಲ್ಲಿ ಕೊಚ್ಚಿದ ಎಳನೀರಿನ ರೀತಿಯಲ್ಲಿ ಬೋಳಿಸಿಕೊಂಡಿರುತ್ತಾರೆ - ಇದಕ್ಕೆ ಟೆಂಡರ್ ಕೋಕೋನಟ್ ಕಟ್ ಎಂದು ಕರೆಯಬಹುದೇನೋ. ಇನ್ನು ಕೆಲವರು ಕೇವಲ ಮೂಗು-ನೆತ್ತಿಯ ನೇರಕ್ಕೆ ಕೂದಲನ್ನು ಇಟ್ಟುಕೊಂಡು ಮಿಕ್ಕೆಲ್ಲವನ್ನೂ ಬೋಳಿಸಿಕೊಂಡಿರುತ್ತಾರೆ. ಇದಕ್ಕೆ ರೋಡ್ ಡಿವೈಡರ್ ಕಟ್ ಎನ್ನಬಹುದು.

ಬೋಡುತನ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದು ಚಾಣಕ್ಯನ ಕಾಲದಲ್ಲಿ. ಊಹೂಂ. ಚರಿತ್ರೆಯ ಚಂದ್ರಗುಪ್ತನ ಕಾಲದಲ್ಲಲ್ಲ; ಟಿವಿಯ ಚಾಣಕ್ಯ ಸೀರಿಯಲ್ ಕಾಲದಲ್ಲಿ. ಪ್ರತಿ ಸೀನ್‌ನಲ್ಲೂ ಛಕ್ಕನೆ ಹೊಳೆಯುವ ತಲೆಗಳ ದೊಡ್ಡ ಗುಂಪೇ ಇರುತ್ತಿದ್ದ ಆ ಸೀರಿಯಲ್ ಕಂಡು ಬಾಲ್ದಿತನವನ್ನು ಮೆಚ್ಚಿದ ಕವಿಯೊಬ್ಬ

ಬೋಡು ಮೂಡಿತೋ ಮಿಂಚು ಮಿಂಚಿತೋ
ತಲೆಯಾಗೆ ಕೇಶ ತುಂಬಿ ಕತ್ರಿ ಛಕ್ಕಂತಾಡೋವಾಗ
ಬೋಡು ಮೂಡಿತೋ ಮಿಂಚು ಮಿಂಚಿತೋ ||

ತಲೆಯಾಗೆ ಹೇನು ಓಡಿ ಝುಂಗುಟ್ಟೈತೆ
ಕಿವಿಯನ್ನೂ ದಾಟಿ ಕೂದ್ಲು ಬೆಳೆದ್ಬುಟ್ಟೈತೆ
ನವೆಯು ಆಗುತಿದೆ ಪರಪರ ಕೆರೆಯುತಿದೆ
ನವೆಯು ಆಗುತಿದೆ ಪರಪರ ಕೆರೆಯುತಿದೆ
ಹೊಟ್ಟೂ ಮೈ ಬಟ್ಟೆಮ್ಯಾಗೆ ಉದುರಿ ಉದುರಿ ಬೀಳುತಿದೆ
ಬೋಡು ಮೂಡಿತೋ ಮಿಂಚು ಮಿಂಚಿತೋ ||

ಬಾಟ್ಲಾಗಿನ ನೀರ ಹನಿ ಚುಮುಗುಟ್ಟೈತೆ
ಕೈಯಾಗಿನ ಕತ್ತರಿಯು ಕತ್ರಿಸ್ತೈತೆ
ಕೂದ್ಲೂ ಹೋಗುತಿದೆ ಬೈತಲೆ ಕರಗುತಿದೆ
ಕೂದ್ಲೂ ಹೋಗುತಿದೆ ಬೈತಲೆ ಕರಗುತಿದೆ
ಫಳ್ಳೂ ಫಳ್ಳಂತ ಮಿಂಚೋ ಬುಲ್ದೇ ಚೆಂದಾಗ್ ಕಾಣುತಿದೆ
ಬೋಡು ಮೂಡಿತೋ ಮಿಂಚು ಮಿಂಚಿತೋ ||

ಎಂದು 'ಬೆಳ್ಳಿ ಮೂಡಿತೋ ಕೋಳಿ ಕೂಗಿತೋ' ಸ್ಟೈಲ್‌ನಲ್ಲಿ ಬರೆದು ಹಾಡಿ ಖ್ಯಾತನಾದನಂತೆ.

ಬೋಡುತನದಲ್ಲಿ ಬಹಳ ಲಾಭಗಳಿವೆ. ದಿನವೂ ಟಿವಿ, ಜಾಹೀರಾತುಗಳನ್ನು ನೋಡುತ್ತಾ ಯಾವ ಶಾಂಪು, ಯಾವ ಹೇರ್ ಕಂಡೀಷನರ್, ಯಾವ ಡ್ಯಾಂಡ್ರಫ್ ಕಂಟ್ರೋಲರ್ ಬಳಸಬೇಕೆಂದು ನಿರ್ಣಯಿಸುವ ಗೋಜಿಲ್ಲ. ಬಾಚಣಿಗೆ ಜಸ್ಟೂರಿನದೋ, ಅಗಲ ಬಾಯಿಯದೋ, ಚಿಕ್ಕಬಾಯಿಯದೋ ಎಂದು ಹುಡುಹುಡುಕಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಕೇಶತೈಲಗಳಿಗೆ ವೃಥಾ ಹಣ ಖರ್ಚುಮಾಡಬೇಕಾಗಿಲ್ಲ. ಹೇರ್ ಸ್ಟೈಲ್ ಯಾವುದೆಂದು ತಲೆ ಕೆಡಿಸಿಕೊಳ್ಳಬೇಕಿಲ್ಲ. ಕೂದಲು ಇದ್ದರೆ ಅದು ಅಸ್ತವ್ಯಸ್ತವಾಗಿ, ಕಣ್ಣಿನ ಮೇಲೆ ಬಿದ್ದು, ಡ್ರೈವಿಂಗ್‌ಗೆ ತೊಂದರೆ ಆಗಬಹುದು. ಬೋಡರಿಗೆ ಈ ತೊಂದರೆಯೇ ಇಲ್ಲ. ಕೇಶರಾಶಿ ಇರುವವರ ಕೂದಲು ಗಾಳಿಗೆ ಹಾರಿದರೂ 'ಸರಿಯಾಗಿ ತಲೆ ಬಾಚಿಕೊಳ್ಳಕ್ಕೇನು ರೋಗ' ಎಂದು ಬೈಸಿಕೊಳ್ಳಬೇಕು; ಬೋಡುತಲೆ ಯಾವಾಗಲೂ ನೀಟ್! ಬೋಡುತಲೆಗಳನ್ನು ಕಂಡರೆ 'ಹಿರಿಯರು. ಪಕ್ಕ ಕೂರಬಹುದು' ಎನ್ನುತ್ತಾ ಸುಂದರ ಹುಡುಗಿಯರೂ ಸನಿಹ ಬರುತ್ತಾರೆ. ಬೋಡರನ್ನು ಬುದ್ಧಿವಂತರು ಎಂದೂ ತಿಳಿಯುವ ದೊ(ದ)ಡ್ಡ ಪಡೆಗಳೇ ಇವೆ. ಒಂದೇ ತೊಂದರೆ - ನಿಮ್ಮನ್ನು ಯಾರೂ ಬಾಚಿ ತಬ್ಬಿಕೊಳ್ಳುವುದಿಲ್ಲ - ಬಾಚುವುದಕ್ಕೆ ಕೂದಲು ಇರುವುದಿಲ್ಲವಲ್ಲ!

ಇಡೀ ಗುಂಪು ಹೊರಗೆ ನಿಂತಿದ್ದಾಗ ಮಳೆ ಬಂದರೆ ಮೊದಲು ತಿಳಿಯುವುದು ಬೋಡರಿಗೇ. ದೂರದಿಂದಲೇ ಇಂತಹವರೇ ಬರುತ್ತಿದ್ದಾರೆಂದು ಅರಿಯಲೂ ಹೊಳೆಹೊಳೆವ ತಲೆ ಸಹಕಾರಿ. ಬೋಡುತನ ತಪ್ಪಲ್ಲ - ಆದರೆ ಆ ಬೋಡುತನ ಕೇವಲ ಹೊರಭಾಗಕ್ಕೆ ಸೀಮಿತವಾಗಿದ್ದರೆ ಮಾತ್ರ. ಅಂದಹಾಗೇ... ದೀಪಾವಳಿ.... ಅಳಿಯಂದರು ಬರ್ತಾರಂತೆ... ದರಗಳು ಆಕಾಶದಲ್ಲಿ... ಎಷ್ಟು ಬೋಡಾಗುತ್ತೋ ಏನೋ..... ಆದರೂ, ಏನ್ಮಾಡಕ್ಕಾಗತ್ತೆ.

ಬೋಡುಂ ಶರಣಂ ಗಚ್ಛಾಮಿ. ▪



ಶ್ರೀ ಬೇಲೂರು ರಾಮಮೂರ್ತಿಯವರ ಶ್ರೀ ಶಂಕರ ಚರಿತಾಮೃತ ಕೃತಿ ಬಿಡುಗಡೆ

ಅಖಿಲ ಬ್ರಾಹ್ಮಣ ಮಹಾಸಭಾದ ಸದಸ್ಯರಲ್ಲೊಬ್ಬರಾದ ಮತ್ತು ಹಿರಿಯ ಬರಹಗಾರರಾದ ಶ್ರೀ ಬೇಲೂರು ರಾಮಮೂರ್ತಿಯವರು 1200 ಸರಳ ಚೌಪದಿಯಲ್ಲಿ ರಚಿಸಿರುವ ಶ್ರೀ ಶಂಕರ ಚರಿತಾಮೃತ ಗ್ರಂಥವನ್ನು ಮಂಗಳವಾರ ತಾ. 11.10.2016 ರಂದು ನವರಾತ್ರಿಯ ಸಂದರ್ಭದಲ್ಲಿ ವಿಜಯ ದಶಮಿಯಂದು ಶೃಂಗೇರಿಯಲ್ಲಿ ನಡದ ಶ್ರೀ ರಾಮ ಪಟ್ಟಾಭಿಷೇಕ ವಾಚನ ಮತ್ತು ಋತ್ವಿಕ್ ಜನರಿಗೆ ಪಾರಿತೋಷಕ ನೀಡುವ ಸಮಾರಂಭದಲ್ಲಿ ಶೃಂಗೇರಿ ಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಮತ್ತು ಕಿರಿಯ ಗುರುಗಳಾದ ಶ್ರೀ ವಿಧುಶೇಖರಭಾರತಿ ಸ್ವಾಮಿಗಳು ಲೋಕಾರ್ಪಣೆ ಮಾಡಿದರು. ಇದಕ್ಕೂ ಮೊದಲು ಉಭಯ ಜಗ್ಗಗುರುಗಳಿಗೆ ಗುರುವಂದನಾ ಸಮಯದಲ್ಲಿ ಕೃತಿಯನ್ನು ಲೇಖಕರು ಅರ್ಪಿಸಿದ್ದರು. ಉಭಯ ಜಗದ್ಗರುಗಳೂ ಪುಸ್ತಕವನ್ನು ನೋಡಿ ಸಂತೋಷಪಟ್ಟರು. ಗ್ರಂಥ ಪ್ರಕಟಣೆಗೆ ಮುನ್ನ ಲೇಖಕರು ಗ್ರಂಥದ ಹಸ್ತ ಪ್ರತಿಯನ್ನು ಶ್ರೀಮಠಕ್ಕೆ ಕಳುಹಿಸಿದ ನಂತರ ಗುರುಗಳು ಅದನ್ನು ಪರಾಮರ್ಶಿಸಿ ಆಶೀರ್ವಾದ ಪೂರ್ವಕ ಶ್ರೀಮುಖ ಕಳಿಸಿದ್ದರು.

ಲೇಖಕರಿಗೆ ಉಭಯ ಜಗದ್ಗುರುಗಳೂ ಆಶೀರ್ವಾದ ಮಾಡಿ ಶ್ರೀ ಶಂಕರರ ಚರಿತೆಯನ್ನು ವಿಶೇಷ ಚೌಪದಿ ರೂಪದಲ್ಲಿ ರಚಿಸಿರುವುದನ್ನು ಶ್ಲಾಘಿಸಿದರು. ಶ್ರೀ ವಿಧುಶೇಖರ ಭಾರತಿ ಸ್ವಾಮಿಗಳು ಲೇಖಕರಿಂದ ಸಾಕಷ್ಟು ವಿವರಗಳನ್ನು ಪಡೆದುಕೊಂಡು ತಾವು ಬಿಡುವು ಮಾಡಿಕೊಂಡು ಪುಸ್ತಕವನ್ನು ಓದಿ ಮತ್ತೊಮ್ಮೆ ಆಶೀರ್ವಾದ ಮಾಡುವುದಾಗಿ ತಿಳಿಸಿದರು.

ಚಿಕ್ಕದಾದ ಚೊಕ್ಕದಾದ ಸಮಾರಂಭದಲ್ಲಿ ನೂಕು ನುಗ್ಗಲಿನಷ್ಟು ಭಕ್ತರು ಆಗಮಿಸಿದ್ದು ಅವರೆಲ್ಲರೂ ಪುಸ್ತಕದ ಲೋಕಾರ್ಪಣೆ ಕಾರ್ಯದಲ್ಲಿ ಭಾಗವಹಿಸಿದ್ದರು. ಪುಸ್ತಕಗಳ ಪ್ರತಿಗಾಗಿ ಲೇಖಕರನ್ನು ಈ ಮೈಲ್ ಮೂಲಕ ಸಂಪರ್ಕಿಸಬಹುದು - **belururamamurthyhy@gmail.com** ಮೊಬೈಲ್ ನಲ್ಲಿ ಎಸ್. ಎಂ. ಎಸ್. ಮುಖಾಂತರವೂ ಸಂಪರ್ಕಿಸಬಹುದು (**98860 61400**) ▪

ಕೆಲವು ಚೌಪದಿಗಳ ಉದಾಹರಣೆ

ಪಿತಾಮಹರು ಜಗತ್ತಿಗೇ ಅದ್ವೈತ ಸಿದ್ಧಾಂತ ಬೋಧಿಸಿದ ಮಹಿಮರು
ಭಕ್ತರಿಗೆ ಅನಂತ ಅಭಯ ನೀಡುತ ಸಲಹಿದ ಅವತಾರ ಪುರುಷರು
ಸನಾತನ ಧರ್ಮ ಪುನುರುತ್ಥಾನಕೆ ಇಳಿದ ದೈವಾಂಶ ಸಂಭೂತರು
ಜಗದಲಿ ಬೆಳಗಿತು ನವೀನ ಕಾಂತಿ

ಶತಮಾನಗಳ ಹಿಂದೆಯೇ ಬರೆದು ಸನಾತನ ಸಂಸ್ಕೃತಿಗೆ ಮುನ್ನುಡಿ
ಆತ್ಮ ಪರಮಾತ್ಮ ಜಗತ್ತಿನಲ್ಲಿ ಎರಡಲ್ಲ ಒಂದೆಂದು ಹಿಡಿದರು ಕನ್ನಡಿ
ಅವರ ಸತ್ಯಾತ್ಮ ಸಾರದ ಹಾದಿಗಳಲಿ ಕಲ್ಲು ಮುಳ್ಳಿನಲಿ ಇಟ್ಟರು ಅಡಿ
ಸೆಳೆದರು ಭಕ್ತರನು ಭಕ್ತಿಯ ಭಾವದಲಿ

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ವಿಚಾರ ವಿಹಾರ

ಮಾಲು, ಅಡಿಲೈಡ್

ಶೀಲಂ ಶೌರ್ಯಂ ಅನಾಲಸ್ಯಂ ಪಾಂಡಿತ್ಯಂ ಮಿತ್ರ ಸಂಗ್ರಹಂ
ಅಚೋರಹರಣೀಯಾನಿ ಪಂಚೈತಾನ್ಯಕ್ಷಯೋ ನಿಧಿಃ |

ಈ ಮೇಲಿನ ಶುಭಾಷಿತವನ್ನು ವಿದ್ವಾನ್ ಶ್ರೀ ಕೆ.ಜಿ.ಸುಬ್ರಾಯಶರ್ಮ ರವರ 'ಸುಭಾಷಿತ ಸಂವತ್ಸರ'ದಿಂದ ಆಯ್ದದ್ದು.

ಸಂಪತ್ತು

ಈ ಮೇಲಿನ ಶ್ಲೋಕದ ಅರ್ಥ:
ಶೀಲ, ಶೌರ್ಯ, ಚುರುಕುತನ, ಪಾಂಡಿತ್ಯ ಮತ್ತು ಸನ್ಮಿತ್ರರ ಸಂಗ್ರಹ
ಈ ಐದು ನಾಶವಾಗದ ನಿಧಿಗಳಿದ್ದಂತೆ. ಯಾವ ಕಳ್ಳನು ಈ ಸಂಪತ್ತುಗಳನ್ನು ಅಪಹರಿಸಿಕೊಂಡು ಹೋಗಲಾರ.

ಜಗತ್ತಿನ ಸಂಪತ್ತುಗಳಲ್ಲಿ ಎರಡು ವಿಧ. ಒಂದು ಶಾಶ್ವತ ಇನ್ನೊಂದು ನಶ್ವರ. ಬೆಳ್ಳಿ, ಬಂಗಾರ, ಹಣ, ವಾಹನ ಇತ್ಯಾದಿ ಪರರು ಅಪಹರಿಸಿಕೊಂಡು ಹೋಗಬಹುದು. ಈ ಸಂಪತ್ತು ಗಳ ಬಗ್ಗೆ ಭಯ ಮತ್ತು ಆತಂಕಗಳು ಇರುವುದು ಸಹಜ.

ಮೇಲಿನ ಶ್ಲೋಕದಲ್ಲಿ ಹೇಳಿರುವುದೆಲ್ಲಾ ನಾಶವಾಗದೆ ಶಾಶ್ವತವಾಗಿ ನಮ್ಮೊಡನೆ ಇರುವಂತಹ ನಿಧಿಗಳು.

ಮೊದಲನೆಯ ನಿಧಿ ಶೀಲಮ್. ಸನ್ನಡತೆ ಮತ್ತು ಸತ್ ಚಾರಿತ್ರ್ಯ ಜೀವನದಲ್ಲಿ ಮನುಷ್ಯನಿಗೆ ಬೇಕಾದ ಅತಿ ಉತ್ತಮ ಗುಣಗಳು.

ಎರಡನೆಯದು ಶೌರ್ಯಂ. ಜೀವನದ ಕ್ಲಿಷ್ಟ ಸಂದರ್ಭದಲ್ಲಿ ಎದೆಗುಂದದೆ ಬಂದ ಸಮಸ್ಯೆಗಳನ್ನು ಎದುರಿಸಲು ಧೈರ್ಯ ಬೇಕಾಗುತ್ತದೆ. ಶೌರ್ಯ ಎಂದರೆ ಕೇವಲ ಧೈಹಿಕ ಬಲಾಢ್ಯತೆಯೇ ಅಲ್ಲ.

ಮೂರನೆಯ ನಿಧಿ ಅನಾಲಸ್ಯಂ. ಯಾವಾಗಲು ನಮ್ಮನ್ನು ಲವಲವಿಕೆಯಲ್ಲಿ ಇಟ್ಟುಕೊಳ್ಳಲು ಬೇಕಾದ ಗುಣ. ಆಲಸ್ಯವಿಲ್ಲದಿರುವಿಕೆ ಗುಣವೂ ಒಂದು ಉತ್ತಮ ಗುಣ. ಇದರಿಂದ ಸಾಕಷ್ಟು ಲಾಭವಿದೆ ಎಂದು ನಮಗೆ ತಿಳಿಯದ ವಿಷಯವಲ್ಲ.

ನಾಲ್ಕನೆಯ ನಿಧಿ ಪಾಂಡಿತ್ಯಂ. ಲೌಕಿಕ ಜ್ಞಾನ ಮತ್ತು ಅಲೌಕಿಕ ಜ್ಞಾನ ವ್ಯಕ್ತಿಯನ್ನು ಉತ್ತಮ ರೀತಿಯಲ್ಲಿ ರೂಪಗೊಳಿಸುತ್ತದೆ. 'ನಹಿ ಜ್ಞಾನೇನ ಸದೃಶಂ'. ಜ್ಞಾನಕ್ಕೆ ಸಮಾನವಾದದ್ದು ಯಾವುದೂ ಇಲ್ಲ.

ಕೊನೆಯ ನಿಧಿ ಮಿತ್ರ ಸಂಗ್ರಹಂ. ಜೀವನದಲ್ಲಿ ಉತ್ತಮ ಮಿತ್ರರು ನಮ್ಮ ಒಡನಾಡುತ್ತಾ ನಮ್ಮೊಡನೆ ಇರುವುದು ನಿಧಿಯಲ್ಲದೆ ಮತ್ತೇನು!

ಈ ಮೇಲಿನ ಐದೂ ಸಂಪತ್ತುಗಳನ್ನು ನಮ್ಮ ಜೀವನದಲ್ಲಿ ಸಂಪಾದಿಸಿಕೊಳ್ಳುವ ಪ್ರಯತ್ನ ಮಾಡುವ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಅಳಿಲು

ಕನಕಾಪುರ ನಾರಾಯಣ

ಸಿಂಹದ ಸ್ನೇಹ ಮಾಡಿದ ಒಂದು ಅಳಿಲು ತನ್ನ ಕಾಡಿನ ರಾಜನ ಮೇಲಿನ ಭಕ್ತಿಯಿಂದಾಗಿ ನಿಷ್ಠೆಯಿಂದ ಅದರ ಸೇವೆ ಮಾಡತೊಡಗಿತು. ಅದನ್ನು ಮೆಚ್ಚಿದ ಸಿಂಹವು "ಅಯ್ಯಾ ಅಳಿಲೇ, ಹೀಗೇ ನನ್ನ ಸೇವೆ ಮಾಡುತ್ತಿರು ನಿನಗೆ ನಿನ್ನ ನಿವೃತ್ತಿಯ ಹೊತ್ತಿಗೆ ಒಂದು ಚೀಲದಷ್ಟು ಬಾದಾಮಿಯನ್ನು ಕೊಡುವೆ" ಎಂದಿತು. ಅಳಿಲು ಬಾದಾಮಿಯ ಆಸೆಯಿಂದ ಆ ದಿನವನ್ನೇ ನೆನೆಯುತ್ತಾ, "ಆಹಾ ಮಿಕ್ಕ ಅಳಿಲುಗಳು ಜೀವನವಿಡೀ ಅಲೆದರೂ ಸಿಗದಷ್ಟು ಬಾದಾಮಿ ನನಗೆ ದೊರೆಯುತ್ತದೆ" ಎಂದು ಜಂಭದಿಂದ ಅಲೆದಾಡುತ್ತಾ ಇತ್ತು. ಹೀಗೇ ಎಡಬಿಡದೆ ನಿಷ್ಠೆಯಿಂದ ಕಾಡಿನರಾಜನ ಸೇವೆ ಮಾಡುತ್ತಿರಲು ಆ ದಿನ ಬಂದೇ ಬಿಟ್ಟಿತು. ಅಳಿಲು ಇಳಿಯ ವಯಸ್ಸಿಗೆ ಬರಲು ಸಿಂಹವು ಅದಕ್ಕೆ ಒಂದು ಚೀಲ ಬಾದಾಮಿ ಕೊಟ್ಟು ಕಳಿಸಿತು. ಆದರೆ ಬಹುದಿನಗಳಿಂದ ಆಸೆ ಹೊತ್ತುಕೊಂಡಿದ್ದ ಅಳಿಲಿಗೆ ಅದನ್ನು ಕಂಡು ಬೇಸರವಾಯಿತು, ಏಕೆಂದರೆ ಅವನ್ನು ಕಡಿಯಲು ಅದರ ಬಾಯಿಯಲ್ಲಿ ಹಲ್ಲುಗಳೇ ಇಲ್ಲವಾಗಿದ್ದವು. ▪

ಅವರೇಕಾಯಿ ಟೊಮೊಟೋ ಭಾತ್

ಬೇಕಾಗುವ ಸಾಮಗ್ರಿಗಳು

- ಅಕ್ಕಿ1 ಪಾವು, ಹಸಿ ಅವರೇಕಾಳು 1ಪಾವು, ಟೊಮೊಟೋ 5
- ಈರುಳ್ಳಿ 3-4, ಒಣಮೆಣಸಿನ ಕಾಯಿ 8-10, ಗರಂ ಮಸಾಲ 1 ಚಮಚ
- ಗಸಗಸೆ 1 ಚಮಚ, ಬಿಳಿ ಎಳ್ಳು 1 ಚಮಚ, ಶುಂಟಿ 2 ಗೋಲಿ ಗಾತ್ರ
- ಕೊತ್ತಂಬರಿ ಸೊಪ್ಪು 1 ಕಂತೆ, ತೆಂಗಿನ ತುರಿ 1 ಬಟ್ಟಲು
- ಎಣ್ಣೆ 40 ಗ್ರಾಂ, ಉಪ್ಪು 1-2 ಚಮಚ

ಮಾಡುವ ವಿಧಾನ

- ಮೆಣಸಿನ ಕಾಯಿ,ಎಳ್ಳು,ಗರಂ ಮಸಾಲ ಒಟ್ಟಿಗೆ ಹುರಿದು ನುಣ್ಣಗೆ ರುಬ್ಬಿಕೊಳ್ಳಿ
- ಪಾತ್ರೆಯಲ್ಲಿ ಎಣ್ಣೆಹಾಕಿ ಕಾದ ನಂತರ ಹೆಚ್ಚಿದ ಈರುಳ್ಳಿ, ಟೊಮೋಟೊ ಹಾಕಿ ಬಾಡಿಸಿ
- ನಂತರ ಅವರೇಕಾಯಿ ಸ್ವಲ್ಪನೀರು ಸೇರಿಸಿ ಕುದಿಸಿ ಬೇಯಿಸಿ
- ಅದಕ್ಕೆ ನೆನೆಸಿಟ್ಟ ಅಕ್ಕಿಗೆ ರುಬ್ಬಿದ ಮಸಾಲೆ, ಉಪ್ಪು ಸೇರಿಸಿ ಸುರಿದು ಅಕ್ಕಿ ಬೇಯುವ ವರೆಗೂ ಬೇಯಿಸಿ
- ಮೇಲೆ ಎರಡು ಚಮಚ ತುಪ್ಪ,ಕೊತ್ತಂಬರಿ ಉದುರಿಸಿ ಬಿಸಿಯಿರುವಾಗಲೇ ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಒಂದು ಹಸ್ತಕ್ಕೆ ನೂರೆಂಟು ಬೆರಳು

೨. ಅಟ್ಟದ ತುಂಬ ಹಗ್ಗ ಹಾಸ್ಕೈತೆ , ಅದರ ಮೇಲೆ ಭೂತ ಕೂತವ್ನೆ

ಉತ್ತರಕ್ಕೆ ಪುಟ ೧೨ ನೋಡಿ

ಉತ್ಸವ ...

ಕನ್ನಡದಿಟ್ಟಿಗೆ ನಮ್ಮನವಣ್ಣ
ಕನ್ನಡದರಮನೆ ಕಟ್ಟುವೆವು
ಕನ್ನಡದೊಳಿತಿಗೆ ನಮ್ಮೆದೆಯಣ್ಣ
ಕನ್ನಡಿಗರಿಗದು ಮಿಡಿಯುವುದು

ಮಾಸವು ಯಾವುದೆ ಆದರು ಕೂಡ
ಮಾಸದು ಕನ್ನಡದಾ ಒಲುಮೆ
ಮಾಸದೊಳನುದಿನ ತಾಯ್ನುಡಿ ನುಡಿದೊಡೆ
ಮಾಸವೆ ಕನ್ನಡದಾ ಚೆಲುಮೆ

ನಿತ್ಯೋತ್ಸವದ ನಾಡಿದು ನಮ್ಮದು
ನಿತ್ಯವು ಬೆಳಗಲಿ ಕನ್ನಡವು
ನಿತ್ಯವು ಕನ್ನಡ ನಲಿದಿರೆ ಮನದಿ
ನಿತ್ಯವು ಕನ್ನಡದುತ್ಸವವು

- ಬದರಿ ತ್ಯಾಮಗೊಂಡ್ಲು

ನಿಸ್ಸಾರ ...

ಪ್ರಾಸವಿಲ್ಲದ ಕವಿತೆ
ಕಾಸು ಮಾಡುವ ಕೃಪಣ
ಮಾಸಿ ಹೋಗಿಹ ಪುಟವು
ಬರಿಯ ನಿಸ್ಸಾರ
ಭಾವವಿಲ್ಲದ ಭಕುತಿ
ಹೂವು ಇಲ್ಲದ ತೋಟ
ದೇವರಿಲ್ಲದ ಮನೆಯು
ಬರಿಯ ನಿಸ್ಸಾರ
ಬೇಸರಾಗುವ ಮಾತು
ಸೋಸು ಹೋಗಿಹ ಸಾರ
ದೋಷವಾಗಿಹ ದೇಹ
ಬರಿಯ ನಿಸ್ಸಾರ
ಮೊಮ್ಮು ಕೊಡದಿಹ ಮಾಯಿ
ಉಮ್ಮ ಕೊಡದಿಹ ಮಡದಿ
ಹಮ್ಮು ತುಂಬಿಹ ಗೆಳೆಯ
ಬರಿಯ ನಿಸ್ಸಾರ
ಮತ್ತುಬರಿಸದ ಮದಿರೆ
ಬತ್ತಿ ಹೋಗಿಹ ಬಾವಿ
ಸುತ್ತಸುಳಿಯುವ ಸಾವು
ಬರಿಯ ನಿಸ್ಸಾರ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

ವರ್ಷ ೨೦೧೧ರ ಜನಗಣತಿಯ ಪ್ರಕಾರ,
೧. ವಿಸ್ತೀರ್ಣದಲ್ಲಿ ಕರ್ನಾಟಕ ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆ ಯಾವುದು? ಅತ್ಯಂತ ಚಿಕ್ಕ ಜಿಲ್ಲೆ ಯಾವುದು?
೨. ಕರ್ನಾಟಕದ ಯಾವ ಜಿಲ್ಲೆ ಅತಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿದೆ? ಯಾವ ಜಿಲ್ಲೆ ಅತಿ ಕಡಿಮೆ ಜನ ಸಾಂದ್ರತೆಯನ್ನು ಹೊಂದಿದೆ?

ಸರಿ ಉತ್ತರಕ್ಕೆ ಪುಟ ೨೦ ನೋಡಿ

ಒಗಟು – ಉತ್ತರ
೧. ಬಾಳೆಗೊನೆ ೨. ಕುಂಬಳಕಾಯಿ

ಹಾಸ್ಯ ಚಿಲುಮೆ

ಮಕ್ಕಳೇ ನೀವು ಆರೋಗ್ಯವಾಗಿರಬೇಕೂಂದ್ರೆ ಕಡಿಮೆ ಅಂದ್ರೂ ಎಂಟು ಗಂಟೆ ಮಲಗಬೇಕು.

ತಿಮ್ಮ ಕೇಳಿದ

"ಅದ್ ಹೇಗೆ ಸಾಧ್ಯ ಸಾರ್? ಶಾಲೆ ೭ಕ್ಕೇ ಶುರು ಆಗತ್ತೆ?"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಚಲಪತಿಗೆ ಆಗಾಗ್ಗೆ ತಿನ್ನಲು ಬಾಯಿಗೆ ಏನಾದರೂ
ಹಾಕಿಕೊಳ್ಳುತ್ತಿರಬೇಕೆನ್ನುವ ಹವ್ಯಾಸ!

೨. ಆತ ಒಂದೇ ನೋಟದಲ್ಲಿ ಆಕೆಯೆಡೆಗೆ ಸೆಳೆಯಲ್ಪಟ್ಟ.

೩.ತಾವರೆಯಂತಹ ಮೊಗವುಳ್ಳವಳೆಂದು ಈಕೆಗೆ ಈ ಹೆಸರೇನು?

೪. ಭಾರವಾದ ಅಕ್ಕಪಕ್ಕದವರು.

೫. ಏನು ಭಾಗ್ಯವೋ, ಭಾರತದ ಈ ಪುರಾತನ ಆರೋಗ್ಯಸೂತ್ರ
ಈಗ ಪ್ರಪಂಚದಾದ್ಯಂತ ಬಲು ಜನಪ್ರಿಯ.

೬. ಸಂಗೀತಗಾರರು ಹೊಗಳಿ ಭಜಿಸುವ ಗಣಪತಿ
ಕನ್ನಡದ ಈ ಊರಿನವ.

ಉತ್ತರ: ಸ್ವಾತಂತ್ರ್ಯಾನಂತರ ದೇಶದ ಅಭಿವೃದ್ಧಿಗಾಗಿ
ಹಮ್ಮಿಕೊಂಡ ಐದೈದು ವರ್ಷಗಳ ಕಾರ್ಯಕ್ರಮ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಡಿಸೆಂಬರ್ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಅಕ್ಟೋಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ಕೆ. ಎಸ್. ಮಂಜುನಾಥ್, ಬೆಂಗಳೂರು
- ಆಶಾ ಮೂರ್ತಿ, ಸಿಡ್ನಿ
- ರೇಣುಕಾ, ಗುಲ್ಬರ್ಗ
- ನಾಗೇಶ್ ಸಿ.ಎಂ, ಮೈಸೂರು

ಅಕ್ಟೋಬರ್ ತಿಂಗಳ ಪದಪುಂಜದ ಉತ್ತರ

೧. ಮಹೇಶನಿಗಿರುವುದು ಬಲು ಉನ್ನತವಾದುದನ್ನೇ
ಸಾಧಿಸಬೇಕೆಂಬ ದೊಡ್ಡ ಆಸೆ.

ಮ	ಹ	ತ್ವಾ	ಕಾಂ	ಕ್ಷೆ

೨. ಸ್ವಯಂ ಸೇವಕರೆಲ್ಲಾ ಸೇರಿ ಕೂಡ ಒಂದನ್ನು
ರಚಿಸಲು ಹೋದಾಗ ನಡೆದ ಬಾರೀ ತಿಕ್ಕಾಟ.

ಸಂ	ಘ	ರ್ಷ

೩.ಈತ ಒಳ್ಳೆಯ ಸ್ವಭಾವದ ಮನುಷ್ಯ.

ಗು	ಣ	ವಂ	ತ

೪. ವ್ರತಗಳಿಗೆ ಬೇಕಾದ್ದು ಶಿಖರದ ಮೇಲೂ ಇರಬಹುದು,
ಶಿರದ ಮೇಲೂ ಇರಿಸಿಕೊಳ್ಳಬಹುದು.

ಕ	ಲ	ಶ

೫. ಸಹಿಯೇನೂ ಹಾಕಬೇಕಿಲ್ಲ, ಬರೀ ಖಚಿತ ಪಡಿಸಿದರಾಯಿತು.

ರು	ಜು	ವಾ	ತು

೬. ಆಸೆಪಟ್ಟ ಕೂಡಲೇ ಮೂಡಿದ ಕುತೂಹಲ!

ಆ	ಸ	ಕ್ತಿ

ಉತ್ತರ: ನಮ್ಮ ಉಪಾಧ್ಯಾಯರು ಎಷ್ಟೇ ಬಲಶಾಲಿಯಾದರೂ,
ಎಲ್ಲವನ್ನೂ ಎಲ್ಲರನ್ನೂ ಸೆಳೆಯುವ ಈ ಗುಣ ಅವರಿಗಿಲ್ಲ.

ಗು	ರು	ತ್ವಾ	ಕ	ರ್ಷ	ಣ	ಶ	ಕ್ತಿ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ- ನರೇಂದ್ರ, ಬೆಂಗಳೂರು

ಲೇಖಕರು:
ನಾಗಶೈಲ ಕುಮಾರ್

ಭಾಗ ೧ - ಪುಟಗಳಿಂದ ಪರದೆಗೆ

ಕನ್ನಡದ ಹೆಮ್ಮೆಯ ನಿರ್ದೇಶಕರಾದ ಪುಟ್ಟಣ್ಣಕಣಗಾಲ್ ತಾವು ನಿರ್ಮಿಸಲಿರುವ ನೂತನ ಚಿತ್ರಕ್ಕಾಗಿ ಮೈಸೂರಿನ ಅಗ್ರಹಾರವೊಂದರಲ್ಲಿ ಕಥೆಗೆ, ಚಿತ್ರೀಕರಣಕ್ಕೆ ಹೊಂದುವಂತಹ ಮನೆಯೊಂದನ್ನು ಹುಡುಕುತ್ತಿದ್ದರಂತೆ. ಹಾಗೇ, ಇದು ಆಗಬಹುದು ಎನ್ನಿಸುವಂತಹ ಮನೆಯೊಂದು ಕಣ್ಣಿಗೆ ಕಂಡಾಗ, ಆ ಮನೆಯನ್ನು ಒಳಹೊಕ್ಕು ಪರಿಶೀಲಿಸಲು ಮುಂದಾದರು. ಮನೆಯ ಮುಂದೆ ಕೈಯ್ಯಲ್ಲಿ ಪುಸ್ತಕವೊಂದನ್ನು ಓದುತ್ತಾ ಕುಳಿತಿದ್ದ ಹುಡುಗಿಯನ್ನು ಸಮೀಪಿಸಿ, ಮನೆಯನ್ನು ಚಿತ್ರೀಕರಣದ ಸಲುವಾಗಿ ಒಳಹೊಕ್ಕು ನೋಡಬಹುದೆ ಎನ್ನಲು, ಆ ಹುಡುಗಿ ಕುತೂಹಲದಿಂದ ಯಾವ ಚಿತ್ರಕ್ಕಾಗಿ ಎನ್ನಲು, ಪುಟ್ಟಣ್ಣನವರು 'ಗೆಜ್ಜೆಪೂಜೆ' ಎಂದರಂತೆ. ಆ ಹುಡುಗಿ ಪರಮಾಶ್ಚರ್ಯದಿಂದ ತಾನು ಓದುತ್ತಿದ್ದ ಪುಸ್ತಕವನ್ನು ತೋರಿಸಿದರೆ, ಆ ಪುಸ್ತಕವೂ ಎಂ.ಕೆ. ಇಂದಿರಾವರ ಕಾದಂಬರಿ "ಗೆಜ್ಜೆಪೂಜೆ" ಆಗಿರಬೇಕೆ. ಜನಪ್ರಿಯವಾದ ಆ ಕಾದಂಬರಿ, ಪುಟಗಳಿಂದ ಪರದೆಗೆ ಏರಿ, ಅದ್ವಿತೀಯ ಚಿತ್ರವೊಂದರ ನಿರ್ಮಾಣವಾಗಿ, ರಾಷ್ಟ್ರಪ್ರಶಸ್ತಿ ಗಳಿಸಿತು. ಕಾದಂಬರಿ, ಚಲನಚಿತ್ರಗಳ ಸಂಗಮ ಎಂತಹ ಸಂಚಲನವನ್ನುಂಟು ಮಾಡಬಹುದೆಂದು ಆ ಚಿತ್ರ ತೋರಿಸಿಕೊಟ್ಟಿತ್ತು.



ಅಭೂತಪೂರ್ವ ಯಶಸ್ಸು ಪಡೆದು, ಧೀರ್ಘ ಕಾಲ ಚಿತ್ರಮಂದಿರಗಳಲ್ಲಿ ಪ್ರದರ್ಶಿತವಾಗಿ ದಾಖಲೆ ನಿರ್ಮಿಸಿದ ನೂರಾರು ಕನ್ನಡ ಚಿತ್ರಗಳಿವೆ. ಬಂಗಾರದ ಮನುಷ್ಯ, ನಾಗರಹಾವು, ಗೆಜ್ಜೆಪೂಜೆ, ಶರಪಂಜರ, ಬೂತಯ್ಯನ ಮಗ ಅಯ್ಯು, ಹೊಂಬಿಸಿಲು, ಎರಡು ಕನಸು, ಬಂಧನ, ಹೀಗೆ ಹಲವಾರು ಚಿತ್ರಗಳು ಕನ್ನಡ ಚಿತ್ರರಂಗದ ಮೈಲುಗಲ್ಲುಗಳಾಗಿ, ಚಿತ್ರರಸಿಕರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತಹ ಪ್ರಭಾವ ಬೀರಿವೆ. ನಿರ್ದೇಶನ, ಅಭಿನಯ, ಸಂಗೀತ, ಛಾಯಾಗ್ರಹಣ ಹೀಗೆ ಅನೇಕ ಅಂಶಗಳು ಈ ಚಿತ್ರಗಳಲ್ಲಿನ ಹೆಗ್ಗಳಿಕೆಗಳಾದರೂ, ಈ ಎಲ್ಲ ಚಿತ್ರಗಳ ಯಶಸ್ಸಿನ ಪ್ರಮುಖ ಕಾರಣ ಆ ಚಿತ್ರಗಳ ಕಥೆ.

ಈ ಯಶಸ್ವೀ ಚಿತ್ರಗಳೆಲ್ಲವೂ ಕಾದಂಬರಿಯಾಧಾರಿತ ಚಿತ್ರಗಳೆಂಬುದು ಒಂದು ವಿಶೇಷ. ಕನ್ನಡದ ಲೇಖಕರ ಜನಪ್ರಿಯ ಕಾದಂಬರಿಗಳನ್ನು ಆಧರಿಸಿ, ಉತ್ತಮ ನಿರ್ದೇಶನದಲ್ಲಿ ಬಂದ ಚಿತ್ರಗಳೆಲ್ಲವೂ ಜನಮನ ಗೆದ್ದಿವೆ.

ಕಾದಂಬರಿಗಳಿಗೂ, ಚಲನಚಿತ್ರಗಳಿಗೂ ವಿಶೇಷ ನಂಟು. ೧೯೬೨ರಲ್ಲಿ ನಿರ್ಮಾಣವಾದ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ ಧರ್ಮ ದೇವತೆ ಆಧಾರಿತ ಕರುಣೆಯೇ ಕುಟುಂಬದ ಕಣ್ಣು ಚಿತ್ರದಿಂದ, ಇತ್ತೀಚಿನ ದೊಡ್ಡೇರಿ ವೆಂಕಟಗಿರಿರಾಯರ 'ಇಷ್ಟಕಾಮ್ಯ', ತೇಜಸ್ವಿಯವರ 'ಕಿರುಗೂರಿನ ಗಯ್ಯಾಳಿಗಳು' ಚಿತ್ರದವರೆವಿಗೂ ಸುಮಾರು ಇನ್ನೂರರಷ್ಟು ಕಾದಂಬರಿ ಆಧಾರಿತ ಚಿತ್ರಗಳು ತಯಾರಾಗಿ, ಅದರಲ್ಲಿ ಬಹಳಷ್ಟು ಚಿತ್ರಗಳು ಭಾರೀ ಯಶಸ್ಸು ಕಂಡಿವೆ.



ಎರಡು ವರ್ಷಗಳ ಕಾಲ ಸತತವಾಗಿ ಪ್ರದರ್ಶಿತವಾಗಿ, ಹಲವಾರು ವರ್ಷಗಳ ನಂತರ ಮತ್ತೆ ಮತ್ತೆ ಬಿಡುಗಡೆಯಾದಾಗಲೂ ಶತದಿನೋತ್ಸವ ಕಂಡಂತಹ, ಕನ್ನಡದ ಸಾರ್ವಕಾಲಿಕ ಶ್ರೇಷ್ಠ ಚಿತ್ರ ಬಂಗಾರದ ಮನುಷ್ಯ. ನಿರ್ಮಾಪಕ ನಿರ್ದೇಶಕರ ಊಹೆಗೂ ಮೀರಿ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಅಪೂರ್ವವೆನಿಸುವ ಯಶಸ್ಸು ಕಂಡಿತ್ತು ಈ ಚಿತ್ರ. ಈ ಚಿತ್ರದ ಯಶಸ್ಸಿನ ಬಗ್ಗೆ ನಂತರದ ದಿನಗಳಲ್ಲಿ ಚರ್ಚೆಯಾದಾಗ, ಎಲ್ಲರೂ ಒಪ್ಪಿಕೊಂಡ ಕಾರಣ, ಡಾ.ರಾಜಕುಮಾರ್ ಅಭಿನಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ನೆಲದ, ಹಳ್ಳಿ ಹಳ್ಳಿಗಳ ಕಥೆ. ಈ ಕಥೆ ಜನರನ್ನು ಎಷ್ಟು ಆಕರ್ಷಿಸಿತ್ತೆಂದರೆ, ಆಮೇಲಿನ ದಿನಗಳಲ್ಲಿ ಅನೇಕ ಯುವಜನರು ಬೇಸಾಯದ ಬಗ್ಗೆ ಆಸಕ್ತಿ ತಳೆದು, ಹಳ್ಳಿಯ ಜೀವನದತ್ತ ನಡೆದಿದ್ದರು. ಈ ಬಂಗಾರದ ಮನುಷ್ಯ, ಖ್ಯಾತ ಕತೆಗಾರ ಟಿ.ಕೆ.ರಾಮರಾಯ ಕಾದಂಬರಿ.

ಹಿರಿಯ ಸಾಹಿತಿ ದಿ.ಗೊರೂರು ರಾಮಸ್ವಾಮಿ ಐಯ್ಯಂಗಾರರ ಬೂತಯ್ಯನ ಮಗ ಅಯ್ಯು ಮತ್ತೊಂದು ಗ್ರಾಮೀಣ ಬದುಕಿನ ಕಥೆ. ವಿರುದ್ಧ ಗುಣಗಳ ಮನುಜರ ನಡುವಿನ ಹೋರಾಟದಲ್ಲಿ, ಮಾನವೀಯತೆಯೇ ಗೆಲ್ಲುವ ಈ ಕಥೆಯು ಚಲನಚಿತ್ರವಾದಾಗ, ಅದು ಕಂಡ ಯಶಸ್ಸು ಊಹೆಗೂ ನಿಲುಕದ್ದು. ಬಂಗಾರದ ಮನುಷ್ಯ ಹಾಗೂ ಬೂತಯ್ಯನ ಮಗ ಅಯ್ಯು ಎರಡೂ ಚಿತ್ರಗಳೂ, ನಿರ್ದೇಶಕ ಸಿದ್ಧಲಿಂಗಯ್ಯ ಸಾಣೆ ಹಿಡಿದ ವಜ್ರಗಳು.

ಮುಂದಿನ ಪುಟ ನೋಡಿ ...

ಕಾದಂಬರಿಗಳಿಗೆ ಚಲನಚಿತ್ರಗಳ ರೂಪು ಕೊಟ್ಟು ಅತ್ಯಂತ ಯಶಸ್ಸು ಗಳಿಸಿದ ನಿರ್ದೇಶಕರಲ್ಲಿ ಮೊದಲಿಗೆ ನೆನಪಾಗುವುದು ಚಿತ್ರಶಿಲ್ಪಿ ಪುಟ್ಟಣ್ಣಕಣಗಾಲ್. ತಮ್ಮ ಮೊದಲ ನಿರ್ದೇಶನಕ್ಕೇ ತ್ರಿವೇಣಿಯವರ ಬೆಳ್ಳಿಮೋಡ ಕಥೆಯನ್ನಾರಿಸಿದ್ದರು. ಒಂದೆರಡು ಚಿತ್ರಗಳ ಹೊರತುಪಡಿಸಿದರೆ ತ್ರಿವೇಣಿ, ಎಂ.ಕೆ.ಇಂದಿರಾ. ತರಾಸು, ವಾಣಿ, ಅಶ್ವತ್ಥ, ದೊಡ್ಡೇರಿ ವೆಂಕಟಗಿರಿ ರಾವ್, ಹೀಗೆ ಅನೇಕರ ಕಾದಂಬರಿಗಳನ್ನು ಆಧರಿಸಿ ಶ್ರೇಷ್ಠ ಚಿತ್ರಗಳನ್ನು ನಿರ್ಮಿಸಿದ್ದರು. ಸ್ತ್ರೀಯರ ಸಮಸ್ಯೆಗಳ ಕುರಿತಂತ ಕಥೆಗಳಿಗೆ ಅವರ ಪ್ರಥಮ ಆದ್ಯತೆ. ಬೆಳ್ಳಿಮೋಡ, ಗೆಜ್ಜೆ ಪೂಜೆ, ಶರಪಂಜರ, ಉಪಾಸನೆ, ಬಿಳೀಹೆಂಡ್ತಿ, ನಾಗರಹಾವು, ಶುಭಮಂಗಳ, ಎಡಕಲ್ಲು ಗುಡ್ಡದ ಮೇಲೆ, ಧರ್ಮಸೆರೆ, ರಂಗನಾಯಕಿ, ಹೀಗೆ ಅವರು ನಿರ್ಮಿಸಿದ ಕಾದಂಬರಿಯಾಧಾರಿತ ಚಿತ್ರಗಳೆಲ್ಲಾ ಅಪೂರ್ವ ಯಶಸ್ಸು ಕಂಡವು. ಚಿತ್ರರಂಗದಲ್ಲಿ ಪ್ರಥಮ ಬಾರಿಗೆ, ಹಂಗು, ಮುನಿತಾಯಿ, ಅತಿಥಿ ಎಂಬ ಮೂರು ಸಣ್ಣಕಥೆಗಳನ್ನು ಆಧಾರಿಸಿ ಕಥಾಸಂಗಮ ನಿರ್ಮಿಸಿದರು.





ಚಿತ್ರನಿರ್ದೇಶಕರಲ್ಲಿ ಕಾದಂಬರಿ ಆಧಾರಿಸಿ ನಿರ್ಮಿಸಿದವರಲ್ಲಿ ಪುಟ್ಟಣ್ಣ ಮೊದಲಿಗರಾದರೆ, ಕಥೆಗಾರರಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಕಥೆಗಳನ್ನು ಚಲನಚಿತ್ರಕ್ಕೆ ಅಳವಡಿಸಿಕೊಂಡಿರುವುದು ತರಾಸುರವರದು. ಚಂದವಳ್ಳಿಯ ತೋಟ, ನಾಗರಹಾವು, ಚಂದನದ ಗೊಂಬೆ, ಬೆಂಕಿಯ ಬಲೆ, ಚಕ್ರತೀರ್ಥ, ಗಾಳಿಮಾತು, ಹಂಸಗೀತೆ, ಹೀಗೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಅವರ ಕಾದಂಬರಿಗಳು ಚಲನಚಿತ್ರಗಳಾಗಿವೆ. ಅಷ್ಟೇ ಅಲ್ಲ ಬಹುತೇಕ ಚಿತ್ರಗಳು ಅದ್ಭುತ ಯಶಸ್ಸು ಕಂಡಿವೆ.

ವಾಣಿಯವರ ಹೊಸಬೆಳಕು, ಶುಭಮಂಗಳ, ಎರಡುಕನಸು, ಅಶ್ವಿನಿರವರ ಮೃಗತೃಷ್ಣಾ ಆಧಾರಿತ ಕಾಮನಬಿಲ್ಲು, ಬೆಸುಗೆ, ಉಷಾನವರತ್ನರಾಮ್ ರವರ ಬಂಧನ, ಹೊಂಬಿಸಿಲು, ತ್ರಿವೇಣಿಯವರ ಬೆಳ್ಳಿಮೋಡ, ಶರಪಂಜರ, ಹಣ್ಣೆಲೆ ಚಿಗುರಿದಾಗ, ಎಂ.ಕೆ. ಇಂದಿರಾರವರ ಗೆಜ್ಜೆಪೂಜೆ, ಫಣಿಯಮ್ಮ, ಮುಂತಾದ ಚಿತ್ರಗಳು ಹೆಂಗೆಳೆಯರ ಮನಗೆದ್ದ ಚಿತ್ರಗಳು. ಶ್ರೀ ಕೃಷ್ಣ ಅಲನಹಳ್ಳಿಯವರ, ಪರಸಂಗದ ಗೆಂಡೆತಿಮ್ಮ, ಕಾಡು, ಭುಜಂಗಯ್ಯನ ದಶಾವತಾರ, ಮಾಸ್ತಿಯವರ ಕಾಕನಕೋಟೆ ಚಿತ್ರಗಳು ವಿಭಿನ್ನ ಅನುಭವ ನೀಡಿದವು, ಸಂಧ್ಯಾರಾಗ, ಹಂಸಗೀತೆ, ಉಪಾಸನೆ, ಉತ್ತಮ ಕಥೆಗಳೊಡನೆ ಸಂಗೀತ ಸುಧೆಯನ್ನೂ ಹರಿಸಿದ್ದವು.
ಕೆ.ಎಸ್.ನರಸಿಂಹಸ್ವಾಮಿಯವರ ಕವನಗಳನ್ನೇ ಆಧಾರಿಸಿ ತೆಗೆದ ಹೊಸಪ್ರಯೋಗದ ಮೈಸೂರು ಮಲ್ಲಿಗೆಯಂತೂ, ಜನಮನ ಸೂರೆಗೊಂಡಿತ್ತು.

ಬಂಗಾರದ ಮನುಷ್ಯ ಹೊರತುಪಡಿಸಿ, ಮಣ್ಣಿನ ದೋಣಿ, ಮರಳು ಸರಪಣಿ, ಸೇಡಿನಹಕ್ಕಿ ಮುಂತಾದವು ಟಿ.ಕೆ.ರಾಮಾರಾಯರ ಪತ್ತೇದಾರಿಯ ಒಲವನ್ನು ಚಿತ್ರಿಸಿದರೆ, ಹೂವುಹಣ್ಣು, ಎರಡುಮುಖ, ಶರಪಂಜರ, ಬೆಳ್ಳಿಮೋಡ ತ್ರಿವೇಣಿಯವರ ಕಾದಂಬರಿಗಳು ಸ್ತ್ರೀಯರ ಮಾನಸಿಕ ತುಮುಲಾಟವನ್ನು ಪರಿಚಯಿಸಿತ್ತು. ಹೀಗೆ ವಿವಿಧ ಲೇಖಕರು, ನಿರ್ದೇಶಕರುಗಳ ಒಲವಿಗನುಗುಣವಾಗಿ ಕಾದಂಬರಿಗಳು ಬೆಳ್ಳಿಪರದೆಯಮೇಲೆ ಮೂಡಿ ಬಂದಿವೆ.

ತಾವು ನಿರ್ದೇಶಿಸಿದ ಚಿತ್ರಗಳಿಗೆಲ್ಲಾ ಒಂದಲ್ಲ ಒಂದು ರೀತಿಯ ಪ್ರಶಸ್ತಿ ಗಳಿಸಿದ ವಿಭಿನ್ನರೀತಿಯ ಚಿಂತನೆಯ ನಿರ್ದೇಶಕ ಎಂ.ಲಕ್ಷ್ಮೀನಾರಾಯಣ್, ಚದುರಂಗರ ಉಯ್ಯಾಲೆ, ಎಲ್.ಎಸ್.ಶೇಷಗಿರಿರಾಯರ ಮುಯ್ಯಿ, ವಿ.ಎಂ.ಇನಾಂದಾರರ ಮುಕ್ತಿ, ಮುಂತಾದ ಗಂಭೀರ ವಸ್ತುಗಳನ್ನು ಆರಿಸಿಕೊಂಡು ಯಶಸ್ವಿಯಾದರು. ಅಂತೆಯೇ ನಿರ್ದೇಶಕ ಎಂ.ಆರ್. ವಿಠಲ್ ರವರು ಕೂಡ ಮಿಸ್.ಲೀಲಾವತಿ, ಮಾರ್ಗದರ್ಶಿ, ಹಣ್ಣೆಲೆ ಚಿಗುರಿದಾಗ, ಎರಡುಮುಖ ದಂತಹ ಗಂಭೀರ ವಸ್ತುಗಳನ್ನು ಆರಿಸಿ ಉತ್ತಮ ಚಿತ್ರಗಳನ್ನು ನೀಡಿದರು.

ದೊರೈ-ಭಗವಾನ್ ಜೋಡಿ ಸುಮಾರು ಇಪ್ಪತ್ತು ಕಾದಂಬರಿ ಆಧಾರಿತವಾದ ಚಿತ್ರಗಳನ್ನು ನಿರ್ಮಿಸಿ ಪ್ರಮುಖ ಸ್ಥಾನದಲ್ಲಿ ನಿಲ್ಲುತ್ತಾರೆ. ಎರಡುಕನಸು, ಬಯಲುದಾರಿ, ಹೊಸಬೆಳಕು, ಚಂದನದ ಗೊಂಬೆ ಹೀಗೆ ಇವರ ಚಿತ್ರಗಳೆಲ್ಲಾ ಜನಪ್ರಿಯ.

'ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದರು' ಎಂಬಂತೆ ಸಿದ್ಧ ಮಸಾಲೆ ಸೂತ್ರಗಳಿಂದ ಹೊಸೆದ ಚಿತ್ರಕಥೆಗಳ ನಡುವೆ ಬರುವ ಕಾದಂಬರಿಯಾಧಾರಿತ ಚಿತ್ರಗಳು ಬಿರುಬೇಸಿಗೆಯಲ್ಲಿ ತಂಪ ತರುವ ತಂಗಾಳಿಯಂತೆ. ಇದನ್ನು ಅರಿತ ಅನೇಕ ನಿರ್ದೇಶಕರು ಉತ್ತಮ ಕಾದಂಬರಿಗಳಿಗೆ ಮೊರೆಹೋಗಿ ಜನಪ್ರಿಯ ಚಿತ್ರಗಳನ್ನಿತ್ತರು. ಟಿ.ವಿ.ಸಿಂಗ್ ಠಾಕೂರ್, ಗೀತಪ್ರಿಯ, ರಾಜೇಂದ್ರಸಿಂಗ್ ಬಾಬು, ನಾಗಾಭರಣ, ಗಿರೀಶ್ ಕಾಸರವಳ್ಳಿ, ಕೆ.ವಿ.ಜಯರಾಂ, ಮುಂತಾದವರನ್ನು ಇಲ್ಲಿ ಪ್ರಮುಖವಾಗಿ ಹೆಸರಿಸಬಹುದು.

ಶಿವರಾಮ ಕಾರಂತ, ಕುವೆಂಪು, ಎಸ್.ಎಲ್.ಭೈರಪ್ಪ, ಮುಂತಾದ ಮಹಾನ್ ಲೇಖಕರ ಕೃತಿಗಳೂ ಬೆಳ್ಳಿತೆರೆಯನ್ನುಕಂಡು ಯಶಸ್ವಿಯಾಗಿವೆ. ಕಂಬಾರ, ಕಾರ್ನಾಡ ಮುಂತಾದವರ ಜಾನಪದ ಕತೆಗಳು ಕಾವ್ಯಮಯವಾಗಿ ತೆರೆಯಕಂಡಿವೆ.

ಮುಂದಿನ ಪುಟ ನೋಡಿ ...

ಆದರೆ ಇದರಲ್ಲಿ ವಿಫಲವಾದವೂ ಹೇರಳವಾಗಿವೆ. ಅನೇಕ ಕಡೆಗಳಲ್ಲಿ ಕಥೆಗಾರರು, ಯಾಕಾದರೂ ತಮ್ಮ ಕಥೆಗಳನ್ನು ಚಿತ್ರಮಾಡಲು ಕೊಟ್ಟೆವೋ ಎಂದು ವ್ಯಥೆ ಪಟ್ಟಿದ್ದೂ ಉಂಟು. ಕನ್ನಡದ ಅತಿ ಯಶಸ್ವೀ ಚಿತ್ರಗಳಲ್ಲೊಂದಾದ 'ನಾಗರಹಾವು' ಚಿತ್ರವನ್ನು ಕಾದಂಬರಿಕಾರರಾದ ತರಾಸು ಅವರು 'ಇದು ನಾಗರಹಾವಲ್ಲ, ಕೇರೆಹಾವು' ಎಂದು ವ್ಯಂಗ್ಯವಾಡಿದ್ದರು.

ಏನೇ ಆದರೂ, ಚಿತ್ರರಸಿಕರು ಕಾದಂಬರಿಯಾಧಾರಿತವಾದ ಚಿತ್ರವೆಂದರೆ ಅಪಾರವಾದ ನಿರೀಕ್ಷೆ ಹೊಂದಿರುತ್ತಾರೆ. ಆ ನಿರೀಕ್ಷೆ ಇದುವರೆವಿಗೂ ಹುಸಿಯಾಗಿರುವ ಸಂದರ್ಭಗಳೂ ಬೆರಳೆಣಿಕೆಯಷ್ಟೇ ಕಡಿಮೆ. ಉತ್ತಮ ಕಥೆಗಳು ಓದುಗರ ಮನಸ್ಸಿನಲ್ಲಿ ಧೀರ್ಘಕಾಲ ನೆಲೆಯಾಗುವುದುಂಟು. ಕೆಲವೊಮ್ಮೆ ಆ ಕಥೆಗಳ ಪಾತ್ರಗಳು ಮನಸ್ಸನ್ನು ಹೊಕ್ಕು, ತಲ್ಲೀನರಾಗಿ ಕಲ್ಪನಾಲೋಕದಲ್ಲಿ ವಿಹರಿಸುವುದೂ ಉಂಟು. ಉದಾಹರಣೆಗೆ ತರಾಸು ರವರ, ದುರ್ಗಾಸ್ತಮಾನ ಮುಂತಾದ ಚಿತ್ರದುರ್ಗದ ಕುರಿತಾದ ಕಾದಂಬರಿಗಳು. ಇವುಗಳನ್ನು ಓದಿದ ಯಾರೇ ಆದರೂ ಆ ವೈಭವ, ದುರಂತಗಳನ್ನು ಕಲ್ಪಿಸಿಕೊಳ್ಳದೆ ಇರುವುದಿಲ್ಲ. ಅಂತೆಯೇ ಕೆ.ವಿ ಅಯ್ಯರ್ ರವರ ಕಾದಂಬರಿಯಿಂದಾಗಿ, ಕನ್ನಡನಾಡಿನ ನಾಟ್ಯಕಲೆಯ ರಾಣಿ ಶಾಂತಲಾಳ ಪಾತ್ರದಲ್ಲಿ ಯಾರು ನಟಿಸಿದರೆ ಚೆನ್ನ ಎನ್ನುವಷ್ಟು ಚರ್ಚೆಗಳಾದದ್ದೂ ಉಂಟು. ಹಾಗಾಗಿ ಜನಪ್ರಿಯ ಕಾದಂಬರಿಗಳನ್ನು ಆಯ್ದು, ಚಿತ್ರಗಳನ್ನು ನಿರ್ಮಿಸಿದರೆ, ಚಿತ್ರರಂಗ ರಸಿಕರನ್ನು ಸೆಳೆಯುವುದಷ್ಟೇ ಅಲ್ಲ ಉತ್ತಮ ಚಿತ್ರಗಳಿಂದ ಶ್ರೀಮಂತವಾಗುವುದರಲ್ಲಿ ಸಂಶಯವಿಲ್ಲ. ▪

ಕೆಲವು ಕಾದಂಬರಿಯಾಧಾರಿತ ಯಶಸ್ವೀ ಚಲನಚಿತ್ರಗಳು.

ಕಥೆ/ಚಲನಚಿತ್ರ	ಲೇಖಕರು	ಚಿತ್ರನಿರ್ದೇಶಕರು
ಬಂಗಾರದ ಮನುಷ್ಯ	ಟಿ.ಕೆ.ರಾಮರಾವ್	ಸಿದ್ಧಲಿಂಗಯ್ಯ
ಬೂತಯ್ಯನ ಮಗ ಅಯ್ಯು	ಗೊರೂರು ರಾಮಸ್ವಾಮಿ ಅಯ್ಯಂಗಾರ್	ಸಿದ್ಧಲಿಂಗಯ್ಯ
ಬಂಧನ	ಉಷಾ ನವರತ್ನರಾಮ್	ಎಸ್.ವಿ.ರಾಜೇಂದ್ರಸಿಂಗ್ ಬಾಬು
ಮುತ್ತಿನ ಹಾರ	ವೆಂ.ಮು.ಜೋಡಿ	ಎಸ್.ವಿ.ರಾಜೇಂದ್ರಸಿಂಗ್ ಬಾಬು
ಗೆಜ್ಜೆಪೂಜೆ	ಎಂ.ಕೆ.ಇಂದಿರಾ	ಪುಟ್ಟಣ್ಣಕಣಗಾಲ್
ಶರಪಂಜರ	ತ್ರಿವೇಣಿ	ಪುಟ್ಟಣ್ಣಕಣಗಾಲ್
ಉಪಾಸನೆ	ದೇವಕಿ ಮೂರ್ತಿ	ಪುಟ್ಟಣ್ಣಕಣಗಾಲ್
ರಂಗನಾಯಕಿ	ಅಶ್ವತ್ಥ	ಪುಟ್ಟಣ್ಣಕಣಗಾಲ್
ಎರಡುಕನಸು	ವಾಣಿ	ದೊರೆ-ಭಗವಾನ್
ಹೊಸಬೆಳಕು	ವಾಣಿ	ದೊರೆ-ಭಗವಾನ್
ಮತದಾನ	ಎಸ್.ಎಲ್.ಭೈರಪ್ಪ	ಟಿ.ಎನ್.ಸೀತಾರಾಂ
ಹಣ್ಣೆಲೆ ಚಿಗುರಿದಾಗ	ತ್ರಿವೇಣಿ	ಎಂ.ಆರ್.ವಿಠಲ್
ಜೀವನಚೈತ್ರ	ವಿಶಾಲಾಕ್ಷಿ ದಕ್ಷಿಣಾಮೂರ್ತಿ	ದೊರೆ-ಭಗವಾನ್
ಪರಸಂಗದ ಗೆಂಡೆತಿಮ್ಮ	ಶ್ರೀಕೃಷ್ಣ ಆಲನಹಳ್ಳಿ	ಮಾರುತಿಶಿವರಾಮ್
ಪ್ರೇಮಪರ್ವ	ಬಿ.ಎಲ್.ವೇಣು	ಸಿದ್ಧಲಿಂಗಯ್ಯ.

ದಿನಕರ ದೇಸಾಯಿ ನಮ್ಮ ನಡುವೆ ಇದ್ದ ಚುಟುಕ ಬ್ರಹ್ಮ (ಜನನ 10.9.1909 – ಮರಣ 6.11.1982 ಮುಂಬೈಯಲ್ಲಿ)

20ನೇ ವಯಸ್ಸಿನಲ್ಲಿ ಬರವಣಿಗೆ ಪ್ರಾರಂಭ ಮಾಡಿದ ಅವರು ಮೊದಲು ಮಾತೃಭಾಷೆ ಕೊಂಕಣಿಯಲ್ಲಿ - ಒಟ್ಟು 12 ಕೃತಿಗಳು ದಿನಕರನ ಚೌಪದಿಗಳು ಸಂಗ್ರಹಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ನಾ ಕಂಡ ಪಡುವಣ - ಪ್ರವಾಸ ಸಾಹಿತ್ಯ

ಪತ್ನಿ ಇಂದಿರಾ –ತುಂಬಾ ಸರಳವಾದ ಮದುವೆ – ಖರ್ಚು 7 ರೂಪಾಯಿ – ಅದೂ ನೊಂದಣಿಗೆ. ಒಮ್ಮೆ ಅವರು ತಮ್ಮ ಹೆಂಡತಿಗೆ ನನ್ನ ಅಂಗಿಗೆ ಜೇಬು ಇಲ್ಲ ಎಂದರೆ ಅವರ ಹೆಂಡತಿ ಅದಕೇ ನಿಮ್ಮನು ಮದುವೆಯಾಗುತ್ತಿರುವುದು ಎಂದರು



ಇಬ್ಬರು ಹೆಣ್ಣು ಮಕ್ಕಳು ಮೊದಲ ಮಗಳು ಉಷಾ ಪ್ರಧಾನ್ (4.8.1938) – ಎಂ.ಎ. - ಬ್ಯಾಂಕ್ ಆಫ್ ಮಹಾರಾಷ್ಟ್ರ - ನಿವೃತ್ತಿ - ಪತಿ ವಿಜಯ ಪ್ರಧಾನ್ ಮುಂಬೈಯಲಿ ಖ್ಯಾತ ನ್ಯಾಯವಾದಿ – ಇಬ್ಬರು ಮೊಮ್ಮಕ್ಕಳು ರಣಜಿತ್ ಮತ್ತು ಸಂಜಿತ್ – ಎರಡನೇ ಮಗಳು ನಿಶಾ ವೆಂಗ್ಸರ್ಕಾರ್ 30.8. 1940ರಂದು ಜನಿಸಿದರು. - ಪತಿ ಸತೀಶ್ಚಂದ್ರ ವೆಂಗ್ಸರ್ಕಾರ್ – ಇಬ್ಬರು ಮೊಮ್ಮಕ್ಕಳು ಮೊನಾಲಿ ಮತ್ತು ಮೇಘನಾ – ಇವರು ಬರೋಡದಲ್ಲಿದ್ದಾರೆ

ದಿನಕರ ಎಂದರೆ ಸೂರ್ಯ – ಇಂದು ಎಂದರೆ ಚಂದಿರ (ಇಂದಿರ) ಸೂರ್ಯ ಚಂದ್ರರು ಹಗಲು (ಉಷಾ) ಮತ್ತು ರಾತ್ರಿ (ನಿಷಾ) ಗಳಿಗೆ ಕಾರಣರಾದರು ಎಂದು ಬರೆಯುತ್ತಾರೆ.

ಲಾಯರ್ ಆಗ ಬಯಸಿದ್ದ ದೇಸಾಯಿಯವರು ಓದಿದ್ದು ಎಂ.ಎ. ಕಲ್ಯಾಣದ ಚಾಲುಕ್ಯರು ಅವರ ಅತ್ಯುತ್ತಮ ಕೃತಿ

ಮುಂಬಯಿಯಲ್ಲಿ ಹಡಗು ನೌಕರರ ಕ್ಷೇಮಾಭಿವೃದ್ಧಿಗೆ ಶ್ರಮಿಸಿದರು. ಸುಮಾರು 12 ವರ್ಷಗಳ ಕಾಲ ಮುಂಬಯಿ ಕಾರ್ಪೊರೇಷನ್ನಿನ ಸದಸ್ಯರಾಗಿದ್ದರು. ಅವರ ಚಿಂತೆ ಊರ ಕಡೆಗೆ ಹರಿಯಿತು. 1957ರಲ್ಲಿ ಕೆನರಾ ವೆಲ್ ಫೇರ್ ಟ್ರಸ್ಟ್ ಸ್ಥಾಪನೆ ಮಾಡಿ ಶಿಕ್ಷಣಕ್ಕೆ ಬುನಾದಿ ಹಾಕಿದರು. ಈಗ ಈ ಟ್ರಸ್ಟ್ ಅಡಿಯಲ್ಲಿ 37 ಶಾಲೆಗಳು – 18 ಕೇಂದ್ರಗಳು - ಸುಮಾರು 10000 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ – ಉತ್ತರ ಕನ್ನಡ ಜಿಲ್ಲೆಗೆ ಶೈಕ್ಷಣಿಕ ಕ್ರಾಂತಿಗೆ ಹರಿಕಾರರಾದರು

ಕನ್ನಡ ಕಲಿಕೆಯ ಬಗೆಗೆ ಆಗಲೇ ದೇಸಾಯಿಯವರು ಹೀಗೆ ಬರೆದಿದ್ದರು

ಕನ್ನಡ ಕಲಿಸಿ ಸಾಕೆನ್ನುವರು ಮಂದಿ
ಆದರೂ ಈ ಜಾಣರಿಗೆ ಬೇಕು ಹಿಂದಿ
ಕೆಲವರಿಗೆ ಆಂಗ್ಲ ಭಾಷೆಯ ಮೇಲೆ ಪ್ರೀತಿ
ಈ ಪರಿಸ್ಥಿತಿಯೊಳಗೆ ಮಕ್ಕಳಿಗೆ ಫಜೀತಿ

ಮುಂದಿನ ಪುಟ ನೋಡಿ ...

ಗೋಖಲೆ ಸೆಂಟನರಿ ಕಾಲೇಜು ಸ್ಥಾಪನೆ ಅಲ್ಲೇ ದೇಸಾಯಿಯವರ ಪ್ರತಿಮೆ ಇದೆ.

ಜನಸೇವಕ ಎನ್ನುವ ಪತ್ರಿಕೆ ಪ್ರಾರಂಭಿಸಿ ಸುಮಾರು 17 ವರ್ಷ ನಡೆಸಿದರು – ಗೌರೀಶ ಕಾಯ್ಕಿಣಿ ಅದಕ್ಕೆ ಬರೆಯುತ್ತಿದ್ದರು. 1950ರಲ್ಲಿ ಮೊದಲ ಕವನ ಸಂಗ್ರಹ – 1955ರಲ್ಲಿ ಎರಡನೆ ಕವನ ಸಂಗ್ರಹ ಹೂಗೊಂಚಲು

ಗಡಿಯಾರದ ಹಾಡು ತುಂಬಾ ಪ್ರಸಿದ್ಧಿ

ಗಂಟೆಯ ನೆಂಟನೆ ಓ ಗಡಿಯಾರ
ಬೆಳ್ಳಿಯ ಬಣ್ಣದ ಗೋಲಾಕಾರ
ವೇಳೆಯ ತಿಳಿಯಲು ನೀನಾಧಾರ
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್

ನಂತರ ನಾಲ್ಕೇ ಸಾಲಿನ ಚೌಪದಿಗಳನ್ನು ಬರೆಯಲಾರಂಭಿಸಿದರು. ಪ್ರಾರಂಭಕ್ಕೆ ಇವು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಕ್ರಾಂತಿಯನ್ನೇ ಪ್ರಾರಂಭ ಮಾಡಿದವು. ನಂತರ ಕನ್ನಡದಲ್ಲಿ ಬರೆಯಲಾರಂಭಿಸಿದರು. ಸುಧಾ ವಾರಪತ್ರಿಕೆಯಲ್ಲಿ ಪ್ರತಿವಾರವೂ ಅವರ ಚುಟುಕಗಳು ಇರುತ್ತಿದ್ದವು. ಇವು ಸರ್ವಜ್ಞ ವಚನಗಳಂತೆ, ಮಂಕುತಿಮ್ಮನ ಕಗ್ಗದಂತೆ ಪ್ರಸಿದ್ಧಿ ಪಡೆದಿವೆ .

1975ನೇ ಇಸವಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್.

60 ವರ್ಷವಾದಾಗ ಷಷ್ಟ್ಯಬ್ದಿ ಮಾಡುತ್ತೇವೆಂದರೆ ಅದಕ್ಕೊಂದು ಚುಟುಕ ಹೇಳಿದರು

ನನಗೇಕೆ ಷಷ್ಟ್ಯಬ್ದಿ ಸಾಕು ಬರವಣಿಗೆ
ಕವಿಗೆ ಬೇಕಾಗಿಲ್ಲ ಯಾವ ಮೆರವಣಿಗೆ
ಮೂಲೆಯಲಿ ಕುಳಿತು ಬರೆದರೆ ಒಂದು ಪದ್ಯ
ತಾಯ್ನುಡಿಗೆ ಅರ್ಪಿಸಿದ ಹಾಗೆ ನೈವೇದ್ಯ

ಮರಣಶಯ್ಯೆಯಲ್ಲಿದ್ದಾಗ ಕೂಡಾ ಹಾಸ್ಯ ಮನೋಭಾವ

ಜಗದೀಶ್ವರನು ಮೊನ್ನೆ ಮಾಡಿದ್ದನು ಟೆಲಿಫೋನು
ಕೇಳಿದನು ದೇಸಾಯಿ ಹೇಗಿದ್ದಿ ನೀನು
ಮುಗಿಯಲಿಲ್ಲವೇ ನಿನ್ನ ಚುಟುಕಗಳ ಹುಚ್ಚು
ಇನ್ನೆರಡು ಬರೆದು ನೀ ಪುಸ್ತಕವ ಮುಚ್ಚು

ಅವರ ಸರಳತೆಗೂ ಇದೆ ಒಂದು ಚೌಪದಿ

ಹದಿನೆಂಟು ಶಾಲೆ ಕಾಲೇಜುಗಳ ಕಟ್ಟಿ
ಮಕ್ಕಳಿಗೆ ಬಡಿಸಿದೆನು ಜೀವನದ ರೊಟ್ಟಿ
ಆದರೂ ತೃಪ್ತಿಯಿಲ್ಲವೋ ಕರುಣ ಸಿಂಧು
ನಾನು ಮಾಡಿದ ಕೆಲಸ ಬರಿ ಒಂದು ಬಿಂದು

ಮುಂದಿನ ಪುಟ ನೋಡಿ ...

ಇವನ ಮನೆಯೊಳಗಿಲ್ಲ ಸಾಕಷ್ಟು ಅಕ್ಕಿ
ಆದರೂ ಈತನಿಗೆ ಹೆಸರು ಹಾಲಕ್ಕಿ
ಹಾಲು ಅಕ್ಕಿಗಳೆರಡೂ ಹೆಸರೊಳಗೆ ಮಾತ್ರ
ಹಸಿವೆಯೆಂಬುದು ಇವನ ಹಣೆಯ ಕುಲಗೋತ್ರ

ನಾ ಬರೆದ ಚುಟುಕಗಳ ಸಂಖ್ಯೆ ವಿಪರೀತ
ಶೇಕಡಾ ತೊಂಭತ್ತು ಹೊಡೆಯುವುವು ಗೋತ
ಉಳಿದ ಹತ್ತರ ಪೈಕಿ ಏಳೆಂಟು ಸತ್ತು
ಒಂದೆರಡು ಬದುಕಿದರೆ ಅವು ಮಾತ್ರ ಮುತ್ತು

ಅಲಲಾ ಕೇಳೋ ಮಗನೇ ಪೌರುಷದ ಸುದ್ದಿ
ಎಷ್ಟು ಮಂದಿಗೆ ಉಂಟು ಈ ತರದ ಬುದ್ದಿ
ಹತ್ತು ವರುಷದ ಹಿಂದೆ ಇತ್ತು ಲಂಗೋಟಿ
ಈ ಹೊತ್ತು ನೋಡಿದರೆ ಬರೀ ಹತ್ತು ಕೋಟಿ

ಅದೃಷ್ಟಶಾಲಿ ಈ ಪಕ್ಷದ ಪುಢಾರಿ
ಕೆಸರು ಹತ್ತುವುದಿಲ್ಲ ಬಿದ್ದರೂ ಜಾರಿ
ಈತನಿಗೆ ಉಂಟು ಇನ್ನೊಂದು ಅನುಕೂಲ
ಸೋತುಹೋದರೆ ಆಗುವನು ರಾಜ್ಯಪಾಲ

ಗಣಪತಿಯ ಹೊಟ್ಟೆ ಒಡೆಯಿತು ಬಹಳ ತಿಂದು
ಉದರಕಲ್ಕೆ ಸುತ್ತು ಹಾಕಿತು ಸರ್ಪ ಬಂದು
ಗುಣಹೊಂದಿದನು ಗಣಪ ಈ ಸುತ್ತಿನಿಂದ
ಘಟಸರ್ಪವೂ ಒಳಿತು ಮಾಡಬಹುದೆಂದ

ಜನ್ನಜನ್ಮಾಂತರಕೆ ಬನವಾಸಿ ನಾಡು
ನಂದನದಿ ಮರಿದುಂಬಿಯನ್ನಾಗಿ ಮಾಡು
ಎಂದು ಹಾಡಿದ ಆ ನಿನ್ನ ಹೃದಯದೊಲುಮೆ
ಇಂದಿಗೂ ನಮ್ಮ ನಾಡಿನ ಮಹಾ ಮಹಿಮೆ

ಜಗದೀಶ್ವರನು ಮೊನ್ನೆ ಮಾಡಿ ಟೆಲಿಫೋನು
ಕೇಳಿದನು ದೇಸಾಯಿ ಹೇಗಿದ್ದೀ ನೀನು
ಮುಗಿಯಲಿಲ್ಲವೇ ನಿನ್ನ ಚುಟುಕಗಳು ಹುಚ್ಚು
ಇನ್ನೆರಡು ಬರೆದು ನೀ ಪುಸ್ತಕವ ಮುಚ್ಚು

ಒಂದು ಬದಿ ಸಹ್ಯಾದ್ರಿ ಒಂದು ಬದಿ ಕಡಲು
ನಡುಮಧ್ಯದಲಿ ಅಡಕೆ ತೆಂಗುಗಳ ಮಡಿಲು
ಸಿರಿಗನ್ನಡದ ಚಪ್ಪರವೇ ನನ್ನ ಜಿಲ್ಲೆ
ಇಲ್ಲಿಯೇ ಹುಟ್ಟುವೆನು ಇನ್ನೊಮ್ಮೆ ನಲ್ಲೆ

ನನಗೇಕೆ ಷಷ್ಟ್ಯಬ್ದಿ ಸಾಕು ಬರವಣಿಗೆ
ಕವಿಗೆ ಬೇಕಾಗಿಲ್ಲ ಯಾವ ಮೆರವಣಿಗೆ
ಮೂಲೆಯಲಿ ಕುಳಿತು ಬರೆದರೆ ಒಂದು ಪದ್ಯ
ತಾಯ್ನುಡಿಗೆ ಅರ್ಪಿಸಿದ ಹಾಗೆ ನೈವೇದ್ಯ

ನಾನು ಹುಟ್ಟಿದ್ದು ಸಖಿ ಅಂಕೋಲೆಯಲ್ಲಿ
ಚಿಂತೆಯಿಲ್ಲದೇ ಸಾಯಬೇಕೆಂಬೆ ಅಲ್ಲಿ
ಅಂಕೋಲೆ ಎನ್ನುವುದು ಕನ್ನಡದ ಕಡಲು
ಈ ಕಡಲಿನೊಳಗಿರಲಿ ದಿನಕರನ ಒಡಲು

ಈ ಪಕ್ಷ ಆ ಪಕ್ಷ ಅಲ್ಲ ಒಂದೆರಡು
ಕೊನೆಗೆ ನೋಡಿದರೆ ಸಖಿ ಎಲ್ಲವೂ ಬರಡು
ಬಡವರಿಗೆ ತಪ್ಪಿಲ್ಲ ಉಪವಾಸ ತಾನೇ
ಇದಕೆನ್ನುವರು ರಾಜಕೀಯದ ಬೇನೆ

ಈ ಚುನಾವಣೆಯೊಂದು ಭಾರೀ ವ್ಯಾಪಾರ
ಮಾರಲಿಕ್ಕೆ ತೆಗೆದಿಟ್ಟ ಸರಕು ಸರಕಾರ
ಯಾರು ಬೇಕಾದರೂ ಕೊಳ್ಳಬಹುದಂತೆ
ಐದು ವರುಷಕ್ಕೊಮ್ಮೆ ನಡೆಯುತ್ತದೆ ಸಂತೆ

ನಿತ್ಯವೂ ಉಂಟು ದೇವರ ಪೂಜೆ ಉದ್ದ
ನಡತೆ ನೋಡಿದರೆ ಯಾವುದೂ ಇಲ್ಲ ಶುದ್ದ
ಪಾಪ ಪರಿಹಾರಕೆ ಬೇಕು ಈ ಪೂಜೆ
ಪುಣ್ಯವಂತರಿಗಿಲ್ಲ ದೇವರ ಮುಲಾಜೆ

ಇವನು ಅಂಕೋಲೆಯವ ಮುದುಕಾಗಿ ಸತ್ತ
ಇವನ ಕೈಯೊಳಗಿತ್ತು ಚೌಪದಿಯ ಬೆತ್ತ
ಹಾವಳಿಯನೆಬ್ಬಿಸಿದ ಈ ಬೆತ್ತದಿಂದ ಕಹಿ
ವಿಡಂಬನದ ಗುಳಿಗೆಯಿಂದ ಕನ್ನಡಕೆ ಸವಿ

ನನಗೆ ಮಕ್ಕಳು ಮೂರು ಹಿರಿಯ ಮಗಳು ಬಾಲೆ
ಇನ್ನೊಂದು ಹೆಣ್ಣು ಹುಟ್ಟಿದಳು ಆಮೇಲೆ
ಗಂಡು ಬೇಕೆಂದು ಬಯಸಿದೆವು ಬಹಳಷ್ಟು
ಕೊನೆಗೆ ಹುಟ್ಟಿದ ಗಂಡು ಶಿಕ್ಷಣದ ಟ್ರಸ್ಟು

ಇಂದ್ರದೇವನು ಮೊನ್ನೆ ಮಾಡಿದನು ಫೋನು
ಕೇಳಿದನು ದೇಸಾಯಿ ಹೇಗಿದ್ದಿ ನೀನು
ನನ್ನ ರೆಂಬೆಗೆ ನಿನ್ನ ಚುಟುಕಗಳು ಹುಚ್ಚು
ಪ್ರತಿಯೊಂದನು ಕಳಿಸಿ ಅದನು ನನ್ನ ಲೆಕ್ಕಕ್ಕೆ ಹಚ್ಚು

ನೀವು ಮಾಡಿ

ಅರಿಶಿನದಿಂದ ಕುಂಕುಮ

ಸಂಗ್ರಹ: ಬದರಿ ತ್ಯಾಮಗೊಂಡ್ಲು

ರಾಜ್ಯೋತ್ಸವದ ಈ ತಿಂಗಳಿನಲ್ಲಿ ಹಳದೀ ಕೆಂಪಿನ ಕನ್ನಡದ ಬಾವುಟವನ್ನು ನೆನೆಯದಿರುವವರು ಇರುವರೇ? ವಿಜ್ಞಾನದ ಈ ಅಂಕಣದಲ್ಲೂ ಕನ್ನಡದ ಬಣ್ಣಗಳ ನೆರಳಿನಲ್ಲೇ ಇರೋಣ. ಅಂದರೆ, ಅರಿಶಿನದಿಂದ ಕುಂಕುಮ ಮಾಡುವ ಬಗೆ ತಿಳಿಯೋಣ.

ಬೇಕಾಗುವ ಸಾಮಗ್ರಿ

- ಅರಿಶಿನದ ಪುಡಿ
- ಎಲೆ-ಅಡಿಕೆಗೆ ಉಪಯೋಗಿಸುವ ಸುಣ್ಣ (Slaked lime)
- ಒಂದಷ್ಟು ನೀರು, ಕಲಸಲು ಒಂದು ಸಣ್ಣ ಪಾತ್ರೆ

ವಿಧಾನ

ಅರಿಶಿನಪುಡಿಯ ಮೇಲೆ ಸುಣ್ಣವನ್ನು ಹಾಕಿ ಸ್ವಲ್ಪ ನೀರಿನ್ನು ಚಿಮುಕಿಸಿ ಕಲಸಿ ಕಲಸುತ್ತ ಹೋದಂತೆ ಆ ಮಿಶ್ರಣವು ಕೆಂಪು ಬಣ್ಣಕ್ಕೆ ತಿರುಗುತ್ತದೆ

ಏನಾಗುತ್ತಿದೆ

ಅರಿಶಿನದಲ್ಲಿರುವ ಕರ್ಕುಮಿನ್ ಎಂಬ ಒಂದು ಅಂಶದಿಂದ ಅದಕ್ಕೆ ಹಳದೀ ಬಣ್ಣವಿರುತ್ತದೆ. ಈ ಅಂಶವು ಅಸಿಡಿಕ್ (ಆಮ್ಲ) ಗುಣವುಳ್ಳದ್ದು. ಸುಣ್ಣದ ವೈಜ್ಞಾನಿಕ ಹೆಸರು ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಆಗಿದ್ದು, ಅದು ಆಲ್ಕಲಿ (ಕ್ಷಾರೀಯ) ಗುಣವುಳ್ಳದ್ದು. ಈ ಕರ್ಕುಮಿನ್ ವೈಶಿಷ್ಟ್ಯವೆಂದರೆ ಅಸಿಡಿಕ್ ಮಾಧ್ಯಮದಲ್ಲಿ ಯಾವುದೇ ಬಣ್ಣ ಬದಲಾವಣೆಯಾಗುವುದಿಲ್ಲ. ಹೀಗಾಗಿ ಅಸಿಡಿಕ್ ಆದ ಅರಿಶಿನದಲ್ಲಿ ತನ್ನ ಮೂಲಬಣ್ಣವಾದ ಹಳದಿಯಲ್ಲಿರುತ್ತದೆ. ಯಾವಾಗ ಆಲ್ಕಲಿ ಮಾಧ್ಯಮವಾದ ಸುಣ್ಣವನ್ನು ಬೆರೆಸುತ್ತೇವೋ, ಆಗ ಅದು ಕೆಂಪು ಬಣ್ಣಕ್ಕೆ ತಿರುಗುತ್ತದೆ. ಈ ಮಿಶ್ರಣವನ್ನು ಒಣಗಿಸಿದಾಗ ಕುಂಕುಮವು ದೊರೆಯುತ್ತದೆ. (ಕೆಂಪುಬಣ್ಣದ ವಿವಿಧ ಚಾಯೆಗಳನ್ನು ಪಡೆಯಲು ಮತ್ತಿತರ ರಾಸಾಯನಿಕೆಗಳನ್ನೂ ಬೆರೆಸಬಹುದೆಂಬ ತಿಳುವಳಿಕೆಯಿದೆ)

ಆರತಿ ಎತ್ತುವಾಗ ಓಕುಳಿಯೆಂದು ತಯಾರಿಸುತ್ತಾರೆ. ಅಲ್ಲೂ ಅರಿಶಿನವನ್ನು ಸುಣ್ಣದ ನೀರಿನಲ್ಲಿ ಹಾಕಿದಾಗ ಕೆಂಪಾಗುವುದನ್ನು ನೀವು ಕಾಣಬಹುದು. ▪

ಜಾಣ ಕರ್ನಾಟಕ – ಉತ್ತರ

೧. ಬೆಳಗಾವಿ ಅತ್ಯಂತ ದೊಡ್ಡ ಜಿಲ್ಲೆ, ಇದರ ವಿಸ್ತೀರ್ಣ ೧೩,೪೧೫ ಚ.ಕಿ.ಮೀ. ಅತಿ ಚಿಕ್ಕ ಜಿಲ್ಲೆ ಬೆಂಗಳೂರು ನಗರ, ಇದರ ವಿಸ್ತೀರ್ಣ ೨,೧೯೦ ಚ.ಕಿ.ಮೀ.

೨. ಬೆಂಗಳೂರು ನಗರ ೪,೩೮೧/ಚ.ಕಿ.ಮೀಟರ್ ನಂತೆ ಅತಿ ಹೆಚ್ಚಿನ ಜನಸಾಂದ್ರತೆಯನ್ನು ಹೊಂದಿದೆ.

ಕೊಡಗು ಜಿಲ್ಲೆ ೧೩೫/ಚ.ಕಿ.ಮೀಟರ್ ನಂತೆ ಅತಿ ಕಡಿಮೆ ಜನ ಸಾಂದ್ರತೆಯನ್ನು ಹೊಂದಿದೆ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಕನಕ ನಮನ

10/12/2016 – ಬೆಳಿಗ್ಗೆ 10:30 ಕ್ಕೆ

ಆಸಕ್ತ ಗಾಯಕರು, ಸಂಗೀತ ಪ್ರೇಮಿಗಳು sugamakannada@gmail.com ಗೆ ಇಮೇಲ್ ಮಾಡಿ

ಅಸ್ತಿತ್ವ

ಕನ್ನಡ ಚಲನಚಿತ್ರ

ಶೀಘ್ರದಲ್ಲೇ

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.